ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಚನ್ನಗಿರಿ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ನರೇಂದ್ರಕುಮಾರ್ ಎಸ್.ಎಸ್.**

ಲೇಖಕರು

**ಡಾ. ಕೆಳದಿ ವೆಂಕಟೇಶ ಜೋಯಿಸ್**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**CHANNAGIRI:** An Introduction Book on Places in Karnataka that Played a Major Role in the Freedom Struggle, Written by Dr. Keladi Venkatesh Jois, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಕೆಳದಿ ವೆಂಕಟೇಶ ಜೋಯಿಸ್

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೫೬


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



ಕರ್ನಾಟಕ ಸರ್ಕಾರ

## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಭಾರತದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮವು ಅಸದೃಶವಾದುದು. ಅಹಿಂಸಾ ಮಾರ್ಗವನ್ನು ಅನುಸರಿಸಿ ಸಾಮಾನ್ಯ ಜನರು ಸ್ವರಾಜ್ಯವನ್ನು ಗೆದ್ದುದು ಅನುಪಮ ಸಾಧನೆ ಎನ್ನಬಹುದು. ಈ ಮಹತ್ಕಾರ್ಯದಲ್ಲಿ ಮೈಮನಗಳನ್ನು ತೆತ್ತು ದುಡಿದ ಸಾಹಿಸಿಗಳಾದ ದೇಶಭಕ್ತರ ಸಂಖ್ಯೆ ಗಣನೀಯ. ಕನ್ನಡ ನಾಡಿನ ಜನರಲ್ಲೂ ಇಂಥವರ ಸಂಖ್ಯೆ ಸಹಸ್ರಾರು. ಈ ದೇಶಸೇವಕರ, ಧೀರ–ಶೂರರ ಚಟುವಟಿಕೆಗಳ ದಾಖಲಾತಿ ಮಹತ್ವದ ಕಾರ್ಯವಾಗಿದೆ. ಅವರಲ್ಲಿ ಅನೇಕರ ಸಾಧನೆಗಳನ್ನು ಸ್ಮರಿಸುವುದು ದೇಶಸೇವೆಗೆ ತನ್ನನ್ನು ತೊಡಗಿಸಿಕೊಂಡಂತೆಯೇ.

ಕರ್ನಾಟಕವು ತನ್ನ ವೀರ ಪರಂಪರೆಗೆ ಸಲ್ಲುವಂತೆ ಎಲ್ಲಾ ಗಾಂಧೀಪ್ರಣೀತ ಚಳವಳಿಗಳಲ್ಲಿ ಭಾಗವಹಿಸುತ್ತ ಬಂದಿತು. ಬ್ರಿಟಿಷ್ ಆಡಳಿತಕ್ಕೆ ನೇರವಾಗಿ ಕರ್ನಾಟಕದ ಏಳು ಜಿಲ್ಲೆಗಳು ಒಳಪಟ್ಟಿದ್ದವು. ಹಳೆಯ ಮೈಸೂರು ಭಾಗದ ಚಳವಳಿ ತೀವ್ರವಾಗಿ ೧೯೩೭ರಿಂದ ಆರಂಭವಾಯಿತು. ಮೊದಮೊದಲು ಅಹಿಂಸಾತ್ಮಕ ಸಾತ್ವಿಕ ಚಳವಳಿಯಿಂದ ಯಾವ ಪರಿಣಾಮವೂ ಆಗಲಾರದೆಂದು ಅನೇಕರು ಭಾವಿಸಿದ್ದರು. ಅಂದು ನಿರ್ಭಯತೆ ಎಂಬುದು ಚಳವಳಿಗಾರರ ಬಿರುದಾಗಿಬಿಟ್ಟಿತ್ತು. ಬಂದ ಕಷ್ಟ ನಷ್ಟಗಳನ್ನೆಲ್ಲ ನಿರ್ಭಯತೆಯಿಂದ ಎದುರಿಸಿ ಅದರಲ್ಲಿಯೇ ಧನ್ಯತೆಯ ಅನುಭವ ಪಡೆಯುವ ಆಧ್ಯಾತ್ಮಿಕ ಮನೋವೃತ್ತಿಯನ್ನು ಭಾರತೀಯರಿಗೆ ಕಲಿಸಿದವರು ಮಹಾತ್ಮ ಗಾಂಧಿಯವರು. ಪ್ರಭಾತಪೇರಿಯಲ್ಲಿ ಭಾಗವಹಿಸುವ ಮಕ್ಕಳನ್ನೂ, ಮಹಿಳೆಯರನ್ನೂ ಮೊದಲ್ಗೊಂಡು ಎದೆತಟ್ಟಿ ಗುಂಡಿನೆದುರಿಗೆ ನಿಲ್ಲಬಲ್ಲ ಸ್ವಯಂಸೇವಕರವರೆಗೆ ಯಾರಿಗೂ ಲಾಠೀ, ಜೈಲು ಘಟಕೀ ಶಿಕ್ಷೆ, ಮರಣದಂಡನೆ ಇವುಗಳ ಭಯವೂ ಇರಲಿಲ್ಲ. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಶಿವಮೊಗ್ಗ ಜಿಲ್ಲೆಯ ಪಾತ್ರವನ್ನು ಕಡೆಗಣಿಸುವಂತಿಲ್ಲ. ಶಿವಮೊಗ್ಗ ನಗರ, ಗ್ರಾಮಾಂತರ ಪ್ರದೇಶದಲ್ಲಿ ನಾಡ ಬಿಡುಗಡೆಯ ಹೋರಾಟದಲ್ಲಿ ಹಲವಾರು ಕಾರ್ಯಕರ್ತರು ಭಾಗವಹಿಸಿದ್ದರು.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ೧೯೪೨ರ ಕ್ವಿಟ್ ಇಂಡಿಯಾ ಅಥವಾ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳುವಳಿ ಒಂದು ಮಹತ್ವದ ಹಂತ. ಇದನ್ನು ಕೊನೆಯ ಹೋರಾಟ ಎಂದು ಕರೆಯುವುದುಂಟು. ೧೮೫೭ರಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಗುವುದಕ್ಕೂ ಸುಮಾರು ೬೦ ವರ್ಷಗಳ ಮೊದಲು ಕರ್ನಾಟಕದಲ್ಲಿ ಬ್ರಿಟಿಷ್ ವಿರುದ್ಧದ ಧ್ವನಿ ಮೊಳಗಿದ್ದನ್ನು ಕಾಣಬಹುದು. ಧೋಂಡಿಯಾ ಎಂಬ ಅಪ್ರತಿಮ ಹೋರಾಟಗಾರ ಬ್ರಿಟಿಷರ ವಿರುದ್ಧ ಕಹಳೆ ಮೊಳಗಿಸಿದ್ದ. ಕಿತ್ತೂರಿನಲ್ಲಿ ಈ ಬಂಡಾಯಗಳ ಸರಣಿ ನಡೆಯುತ್ತಿದ್ದಾಗಲೇ ೧೮೩೦–೩೧ರಲ್ಲಿ ಬಿದನೂರಲ್ಲಿ ಬೂದಿ ಬಸಪ್ಪನೆಂಬ ವ್ಯಕ್ತಿಯ ನಾಯಕತ್ವದಲ್ಲಿ ಬಂಡಾಯವಾಯಿತು. ಬ್ರಿಟಿಷರ ಕಂದಾಯ ವಸೂಲಿ ಮಿತಿಯ ಬಗ್ಗೆ ಅಸಮಾಧಾನ ತಳೆದ ಶಿವಮೊಗ್ಗ ಮತ್ತು ದಕ್ಷಿಣ ಕನ್ನಡದ ರೈತರು ಈ ಬಂಡಾಯದಲ್ಲಿ ವ್ಯಾಪಕವಾಗಿ ಪಾಲುಗೊಂಡರು. ಈ ಬಂಡಾಯ ೧೯೩೧ರಲ್ಲೇ ಕೊನೆಗೊಂಡರೂ ಬೂದಿ ಬಸಪ್ಪನ ಬಂಧನವಾದದ್ದು ೧೮೩೪ರಲ್ಲಿ. ಶಿಕಾರಿಪುರದ ಕುಸ್ಕೂರಿನ ಪ್ರಕರಣವೊಂದು ಗ್ರಾಮಸ್ಥರ ಮೇಲಿನ ಗಾಂಧಿ ವಿಚಾರಗಳ ಪ್ರಭಾವಕ್ಕೆ ಸಾಕ್ಷಿಯಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಚಳುವಳಿಯಲ್ಲಿ ಸಾಹಸಮಯ ಸಾಧನೆಗಳು ಮೊದಲಾದ ವಿವರಗಳು ಸಂಗ್ರಹ ಯೋಗ್ಯವಾಗಿರುತ್ತವೆ. ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದಂತೆ ಎಪ್ಪತ್ತೈದು ಪುಸ್ತಕಗಳನ್ನು ಹೊರತರುತ್ತಿರುವುದು ಸ್ತುತ್ಯರ್ಹವಾಗಿದೆ. ಈ ಸಂದರ್ಭದಲ್ಲಿ ನನಗೆ ಶಿವಮೊಗ್ಗ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಕುರಿತು ದಾಖಲಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಕಾಡೆಮಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ನಾನು ಅಭಾರಿಯಾಗಿದ್ದೇನೆ.

ದಿನಾಂಕ: ೨೦.೧೨.೨೦೨೧ **ಡಾ. ಕೆಳದಿ ವೆಂಕಟೇಶ್ ಜೋಯಿಸ್**

ಸಾಗರ

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟದ ಬೀಜಾಂಕುರ | ೧೫ |
| ಶಿವಮೊಗ್ಗ ಜಿಲ್ಲೆಯಾದ್ಯಂತ ನಡೆದ ಹೋರಾಟ | ೧೭ |
| ಹೋರಾಟದಲ್ಲಿ ಚನ್ನಗಿರಿಯ ಪಾತ್ರ | ೨೪ |
| ಚನ್ನಗಿರಿಯ ಧೋಂಡಿಯಾ ವಾಘ್ | ೨೭ |
| ಬೂದಿ ಬಸಪ್ಪನ ಬಂಡಾಯ | ೩೫ |
| ಹೋರಾಟದಲ್ಲಿ ಪಾಲ್ಗೊಂಡ ಕೆಲವು ಮಹನೀಯರು | ೪೦ |
| ಈಸೂರು ಘಟನೆ ೧೯೪೨ | ೪೭ |
| ಆಕರ | ೫೨ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೩ |

# ಸ್ವಾತಂತ್ರ್ಯ ಹೋರಾಟದ ಬೀಜಾಂಕುರ

ಮಾನವನ ಜೀವನಕ್ಕೆ ಉಸಿರು ಅವಶ್ಯವಿರುವಂತೆಯೇ ಅವನ ಬೆಳವಣಿಗೆಗೆ, ರಾಷ್ಟ್ರೀಯತ್ವದ ಅರಿವು ಮೂಡಿಸಿಕೊಂಡಿರುವ ಮನುಕುಲಕ್ಕೆ, ಅದರಂತೆಯೇ ಎಚ್ಚೆತ್ತ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಅತ್ಯಾವಶ್ಯವಾಗಿರುತ್ತದೆ. ಪ್ರತಿಯೊಂದು ರಾಷ್ಟ್ರವೂ ತಾನು ಸ್ವತಂತ್ರವಾಗಿರಬೇಕೆಂದು ಅಪೇಕ್ಷಿಸುವುದು ಸಹಜ. ಅದರಂತೆ ಭಾರತವು ಸಹ ತನ್ನನು ಆಳಲು ಸ್ಥಾಪಿತವಾದ ಬ್ರಿಟಿಷರ ಆಡಳಿತದಿಂದ ಸ್ವಾತಂತ್ರ್ಯ ಬಯಸುವುದು ಅಂತಹದ್ದರಲ್ಲಿ ಒಂದಾಗಿತ್ತು. ಸ್ವಾತಂತ್ರ್ಯದ ಬಗ್ಗೆ ಎಚ್ಚರ ಹುಟ್ಟಿಸಿಕೊಂಡ ಮತ್ತು ಸ್ವಾತಂತ್ರ್ಯಕ್ಕಾಗಿ ಆತುರರಾದ ಭಾರತೀಯರು ವೈಯಕ್ತಿಕವಾಗಿ ಇಲ್ಲವೇ ಸಣ್ಣ ದೊಡ್ಡ ಗುಂಪು ಕಟ್ಟಿಕೊಂಡು ಬ್ರಿಟಿಷರ ಆಳ್ವಿಕೆಯನ್ನು ಎದುರಿಸುತ್ತಿದ್ದರು. ಈ ನೆಲೆಯಲ್ಲಿ ೧೮೫೭ರಲ್ಲಿ ಶಸ್ತ್ರಾಸ್ತ್ರಗಳಿಂದ ಭಾರತೀಯ ಸೈನಿಕರು, ಹಲ ಕೆಲವು ಸಣ್ಣಪುಟ್ಟ ಅರಸುಮನೆತನಗಳು ದೊಡ್ಡ ಬಂಡಾಯವನ್ನು ಹೂಡಿದರು. ಇದರಲ್ಲಿ ಬ್ರಿಟಿಷ್ ಆಡಳಿತದಲ್ಲಿ ಆಶ್ರಯ ಅಪೇಕ್ಷಿಸುತ್ತಿದ್ದ ಉತ್ತರ ಭಾರತದ ಕೆಲವರು ರಾಜಮಹಾರಾಜರು ಮತ್ತು ಅಲ್ಲಿನ ಅನೇಕರು ಬ್ರಿಟಿಷರ ಪರವಾಗಿ ನಿಂತು ಅವರ ಕಡೆ ಹೋರಾಡುವುದರ ಮೂಲಕ ಬ್ರಿಟಿಷ್ ಸತ್ತೆಯನ್ನು ಇಲ್ಲಿ ಸ್ಥಿರಗೊಳಿಸುವಲ್ಲಿ ಪ್ರಯತ್ನಿಸಿದುದೂ ಇದೆ. ಸಶಸ್ತ್ರ ಹೋರಾಟ ಸಾಧ್ಯವಿಲ್ಲವೆಂದು ಮನಗಂಡ ಭಾರತೀಯ ಮುಖಂಡರು ನಿಃಶಸ್ತ್ರ ಪ್ರತೀಕಾರದ ಮಾರ್ಗವನ್ನು, ಸಾರ್ವಜನಿಕ ಆಂದೋಲನದ ಮಾರ್ಗವನ್ನು ಅನುಸರಿಸಲು ಮುಂದಾದರು. ೧೯೧೯ರಲ್ಲಿ ಮತ್ತು ಅನಂತರದಲ್ಲಿ ಅದಕ್ಕೆ ಅಹಿಂಸಾತ್ಮಕ, ಅಸಹಕಾರದ, ದುಷ್ಟ ಕಾನೂನುಗಳ ಭಂಗದ, ಕರನಿರಾಕರಣೆಯಂಥ ಉಗ್ರ ಚಳವಳಿಯ ಹಾಗೂ ವಿವಿಧ ಸತ್ಯಾಗ್ರಹಗಳ ರೂಪವನ್ನು ಕೊಡುವುದರೊಂದಿಗೆ ಸ್ವಾತಂತ್ರ್ಯ ಚಳುವಳಿಯತ್ತ ದಾಪುಗಾಲು ಇಕ್ಕಲು ಪ್ರಾರಂಭಿಸಿದರು.

ಭಾರತದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮವು ಅಸದೃಶವಾದುದು. ಅಹಿಂಸಾ

ಮಾರ್ಗವನ್ನು ಅನುಸರಿಸಿ ಸಾಮಾನ್ಯ ಜನರು ಸ್ವರಾಜ್ಯವನ್ನು ಗೆದ್ದುದು ಅನುಪಮ ಸಾಧನೆ ಎನ್ನಬೇಕು. ಮಾನವ ಚರಿತ್ರೆಯಲ್ಲೇ ಇದೊಂದು ಹೊಸ ಅಧ್ಯಾಯವಾಗಿದೆ. ಈ ಮಹತ್ಕಾರ್ಯದಲ್ಲಿ ಮೈಮನಗಳನ್ನು ತೆತ್ತು ದುಡಿದ ಸಾಹಿಸಿಗಳಾದ ದೇಶಭಕ್ತರ ಸಂಖ್ಯೆ ಬಹಳಷ್ಟಿದೆ. ಈ ದೇಶಸೇವಕರ, ಧೀರ–ಶೂರರ ಚಟುವಟಿಕೆಗಳ ದಾಖಲಾತಿ ಮಹತ್ವದ ಕಾರ್ಯವಾಗಿದೆ. ಕನ್ನಡ ನಾಡಿನ ಜನರಲ್ಲೂ ಇಂಥವರ ಸಂಖ್ಯೆ ಸಹಸ್ರಾರು. ಅವರಲ್ಲಿ ಅನೇಕರ ಸಾಧನೆಗಳನ್ನು ಸ್ಮರಿಸುವುದು ದೇಶಸೇವೆಗೆ ತನ್ನನ್ನು ತೊಡಗಿಸಿ ಕೊಂಡಂತೆಯೇ.

ಭಾರತ ಸ್ವಾತಂತ್ರ್ಯ ಸಮರದಲ್ಲಿ ಕರ್ನಾಟಕದ ಪಾತ್ರ ಗಣನೀಯವಾದುದು. ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಸಮರ್ಪಕವಾಗಿ ಮತ್ತು ಸಮಗ್ರವಾಗಿ ಈವರೆಗೆ ದಾಖಲಾತಿ ಕಂಡಿಲ್ಲ ಎಂದೇ ಹೇಳಬಹುದು. ಈ ಹೋರಾಟವನ್ನು, ದೇಶೀಯ ರಾಜರು ಬ್ರಿಟಿಷರ ವಿರುದ್ಧ ಹೋರಾಡಿದ್ದು, ದೇಶಪ್ರೇಮಿಗಳೂ ಸ್ವಾತಂತ್ರ್ಯಪ್ರಿಯ ವೀರ ಸರದಾರರೂ ಪಾಳೆಯಗಾರರೂ ಮತ್ತು ಇತರರು, ಬ್ರಿಟಿಷರ ವಿರುದ್ಧ ಸಶಸ್ತ್ರ ಬಂಡಾಯವೆದ್ದು ಅವರ ಗುಂಡಿಗೆ ಎದೆಯೊಡ್ಡಿ ನಿಂತದ್ದು ಮತ್ತು ಕಾಂಗ್ರೆಸ್ ಹಾಗೂ ಗಾಂಧೀಜಿಯವರ ನೇತೃತ್ವದ ಜನಸಾಮಾನ್ಯರ ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟ – ಹೀಗೆ ಮೂರು ಹಂತಗಳಲ್ಲಿ ನಾವು ಭಾರತದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವನ್ನು ಅಧ್ಯಯನ ಮಾಡಬಹುದಾಗಿದೆ.

ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹ ಕಷ್ಟದ ಕೆಲಸ. ಇದಕ್ಕೆ ಸರಕಾರಿ ದಾಖಲೆಗಳು, ಆಗಿನ ವೃತ್ತಪತ್ರಿಕೆಗಳು, ಸಣ್ಣಪುಟ್ಟ ಪುಸ್ತಕಗಳು, ಸರಕಾರೀ ಗುಪ್ತ ಕಾಗದಪತ್ರಗಳು ಮತ್ತು ಹೋರಾಟಗಾರರ ಹಾಗೂ ಪ್ರತ್ಯಕ್ಷದರ್ಶಿಗಳ ಹೇಳಿಕೆಗಳೇ ಮೂಲ ಆಧಾರವಾಗಿದೆ. ಇದರಲ್ಲಿ ಮೂರನೆಯ ವರ್ಗದ ದಾಖಲಾತಿ ಇನ್ನೂ ಪೂರ್ಣ ಪ್ರಮಾಣದಲ್ಲಿ ನಮ್ಮಲ್ಲಿ ಈವರೆಗೆ ಆಗಿರುವುದು ಕಡಿಮೆಯೇ. ಆ ಕೆಲಸ ಅಲ್ಲಿ ಇಲ್ಲಿ ಇನ್ನೂ ಉಳಿದಿರುವುದಿದೆ. ತುರ್ತಾಗಿ ಆ ಕೆಲಸ ಅಗಬೇಕಾಗಿದೆ. ಇವುಗಳಲ್ಲಿ ನಡೆದ ಘಟನೆಗಳ ಕುರಿತು ಆಗಿಹೋದ ಸಂಗತಿಗಳ ಕುರಿತು ಉಲ್ಲೇಖ ಸಿಗುತ್ತದೆ. ೧೯೧೯–೧೯೪೭ ರವರೆಗಿನ ವಾತಾವರಣ, ಅದರಲ್ಲಿ ಆದ ಏರಿಳಿತಗಳು, ಹಸಿಬಿಸಿಗಳು, ಜನರ ಮಾನಸದ ಚಿತ್ರ, ವೈಯಕ್ತಿಕ ಮತ್ತು ಸಾಂಘಿಕ ಪ್ರತ್ಯಕ್ಷ



ಅನುಭವ ಮುಂತಾದ ರಸರುಚಿಯುಳ್ಳ ವಿಷಯಗಳು ಕಛೇರಿಗಳಲ್ಲಿ, ಕಾಗದ ಪತ್ರಗಳಲ್ಲಿ ದೊರೆಯುಲಾರವು. ಇದೆಲ್ಲ ನಮಗೆ ತಿಳಿಯಬೇಕಾದರೆ ಆಗಿನ ಕಾರ್ಯಕರ್ತರ ನಡುವೆ ನಡೆದ ಪತ್ರವ್ಯವಹಾರ, ಭೂಗತರಾಗಿ ನಡೆಸಿದ ಪತ್ರ, ಪತ್ರಿಕೆಗಳು, ಕೋರ್ಟು ಕಛೇರಿಗಳಲ್ಲಿ ಅವರು ಕೊಟ್ಟ ಹೇಳಿಕೆಗಳು ಮೊದಲಾದವುಗಳ ಸಂಶೋಧನೆ, ಸಮಾಲೋಚನೆ ಮಾಡುವುದು ಅಗತ್ಯವಾಗಿದೆ.

ಎಂದಿನಂತೆ ಕರ್ನಾಟಕವು ತನ್ನ ವೀರ ಪರಂಪರೆಗೆ ಸಲ್ಲುವಂತೆ ಎಲ್ಲಾ ಗಾಂಧೀಪ್ರಣೀತ ಚಳವಳಿಗಳಲ್ಲಿ ಭಾಗವಹಿಸುತ್ತ ಬಂದಿತು. ಬ್ರಿಟಿಷ್ ಆಡಳಿತಕ್ಕೆ ನೇರವಾಗಿ ಕರ್ನಾಟಕದ ಏಳು ಜಿಲ್ಲೆಗಳು ಒಳಪಟ್ಟಿದ್ದವು. ಹಳೆಯ ಮೈಸೂರು ಭಾಗದ ಚಳವಳಿ ತೀವ್ರವಾಗಿ ೧೯೩೭ ರಿಂದ ಆರಂಭವಾಯಿತು. ಮೊದಮೊದಲು ಅಹಿಂಸಾತ್ಮಕ ಸಾತ್ವಿಕ ಚಳವಳಿಯಿಂದ ಯಾವ ಪರಿಣಾಮವೂ ಆಗಲಾರದೆಂದು ಅನೇಕರು ಭಾವಿಸಿದ್ದರು. ಆದರೆ, ೧೯೪೨–೪೩ರಲ್ಲಿ ಭಾರತದಲ್ಲಿಯ ಬ್ರಿಟಿಷ್ ಅಧಿಕಾರಿಗಳು ಇಂಗ್ಲೆಂಡಿನ ಪ್ರಧಾನಿಗೆ ಬರೆದ ಪತ್ರವೊಂದರಲ್ಲಿ "೧೮೫೭ ರಲ್ಲಿ ನಡೆದ ಬಂಡಾಯಕ್ಕೆ ಸರಿಮಿಗಿಲಾದ, ಆದರೆ ರಕ್ತರಹಿತ, ಉದ್ರೇಕವನ್ನು ನಾವು ಎದುರಿಸುತ್ತಿರುವೆವು" ಎಂಬ ಮಾತುಗಳು ಅಂದು ನಡೆದ ಚಳವಳಿಯ ಪರಿಣಾಮಕಾರಿತ್ವವನ್ನು ತಿಳಿಸುವಲ್ಲಿ ಸಹಕಾರಿಯಾಗಿದೆ. ಅಂದು ನಿರ್ಭಯತೆ ಎಂಬುದು ಚಳವಳಿಗಾರರ ಬಿರುದಾಗಿಬಿಟ್ಟಿತ್ತು. ಬಂದ ಕಷ್ಟನಷ್ಟಗಳನ್ನೆಲ್ಲ ನಿರ್ಭಯತೆಯಿಂದ ಎದುರಿಸಿ, ಅದರಲ್ಲಿಯೇ ಧನ್ಯತೆಯ ಅನುಭವ ಪಡೆಯುವ ಆಧ್ಯಾತ್ಮಿಕ ಮನೋವೃತ್ತಿಯನ್ನು ಭಾರತೀಯರಿಗೆ ಕಲಿಸಿದವರು ಮಹಾತ್ಮ ಗಾಂಧಿಯವರು. ಪ್ರಭಾತಪೇರಿಯಲ್ಲಿ ಭಾಗವಹಿಸುವ ಮಕ್ಕಳನ್ನೂ, ಮಹಿಳೆಯರನ್ನೂ ಮೊದಲ್ಗೊಂಡು ಎದೆತಟ್ಟಿ ಗುಂಡಿನೆದುರಿಗೆ ನಿಲ್ಲಬಲ್ಲ ಸ್ವಯಂಸೇವಕರವರೆಗೆ ಯಾರಿಗೂ ಲಾಠೀ, ಜೈಲು ಘಟಕೀಶಿಕ್ಷೆ, ಮರಣದಂಡನೆ ಇವುಗಳ ಯಾವ ಭಯವೂ ಇರಲಿಲ್ಲ. ಪೋಲೀಸರು ಅನ್ಯಾಯದಿಂದ ಹಾಕಿದ ಕೀಲಿಯನ್ನು ಅವರೆದುರೇ ಮುರಿಯಲು ಸಾಹಸಮಾಡಿದ ಮಾಣದೇವಿ ಎಂಬ ಹೆಣ್ಣುಮಗಳ ಧೈರ್ಯ ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

### ಶಿವಮೊಗ್ಗ ಜಿಲ್ಲೆಯಾದ್ಯಂತ ನಡೆದ ಹೋರಾಟ

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಶಿವಮೊಗ್ಗ ಜಿಲ್ಲೆಯ ಪಾತ್ರವನ್ನು

ಕಡೆಗಣಿಸುವಂತಿಲ್ಲ. ಶಿವಮೊಗ್ಗ ನಗರದಲ್ಲಿ ನಾಡ ಬಿಡುಗಡೆಯ ಹೋರಾಟದಲ್ಲಿ ಹಲವಾರು ಕಾರ್ಯಕರ್ತರು ಕಾಂಗ್ರೆಸ್ ಚಳುವಳಿಯಲ್ಲಿ ಭಾಗವಹಿಸಿದ್ದರು. ಅಂತಹವರಲ್ಲಿ ಕಾಳೋಜಿರಾವ್ ಯಾದವ್, ಭೂಪಾಳಂ ಚಂದ್ರಶೇಖರಯ್ಯ ಮೊದಲಾಗಿ ಹಲವರಿದ್ದಾರೆ. ಮೈಸೂರು ಕಾಂಗ್ರೆಸ್ಸಿನ ಆರಂಭದ ಗಣ್ಯ ನಾಯಕರಲ್ಲಿ ಇವರು ಒಬ್ಬರಾಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಜೈಲುವಾಸ ಅನುಭವಿಸಿದ್ದಿಲ್ಲ. ಇವರನ್ನು ದಸ್ತಗಿರಿ ಮಾಡಲು ಆಗ್ಗೆ ಮುಂಬೈ ಸರಕಾರದಿಂದ ಎರಡು ಸಾರಿ ವಾರೆಂಟು ಬಂದಿದ್ದರೂ ಮೈಸೂರು ಸರಕಾರ ಅದನ್ನು ಜಾರಿ ಮಾಡಿರಲಿಲ್ಲ. ಆದರೆ, ಇವರಿಗೆ ಭದ್ರಾವತಿಗೆ ಪ್ರವೇಶ ನಿಷೇಧಿಸಲಾಗಿತ್ತು. ಇವರ ತಮ್ಮ ಭೂಪಾಳಂ ಕೃಷ್ಣಮೂರ್ತಿ. ಇವರು ಚಿಕ್ಕವರಿದ್ದಾಗಲೇ ಹುಬ್ಬಳ್ಳಿಯಲ್ಲಿ ಡಾ. ಹರ್ಡೀಕರರು ನಡೆಸುತ್ತಿದ್ದ ಶಿಬಿರ ಸೇರಿಕೊಂಡಿದ್ದರು. ಮುಂದೆ ಮನೆಯ ಹಿರಿಯರು ಒತ್ತಾಯದಿಂದ ವಾಪಸ್ ಕರೆತಂದಿದ್ದರು. ಧ್ವಜ ಸತ್ಯಾಗ್ರಹ ನಡೆಯುವ ಕಾಲಕ್ಕೆ ಮತ್ತೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಇವರು ಜೈಲುವಾಸವನ್ನು ಅನುಭವಿಸಿದ್ದರು. ಅಂದು ಮೈಸೂರು ಜನತೆ ಅದ್ಭುತ ಎನಿಸುವ ರೀತಿಯಲ್ಲಿ ಸ್ವಾತಂತ್ರ್ಯ ಸಮರದಲ್ಲಿ ಧುಮುಕಿದ್ದರು. ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ ಅವರು ಭಾಗವಹಿಸಿದ್ದರು. ಗಾಂಧೀಜಿಯವರು ಈಗಾಗಲೇ ಮುದ್ರಿತಗೊಂಡಿದ್ದ ಭಾಷಣವನ್ನು ಓದದೆ ಪ್ರಾಸ್ತಾವಿಕವಾಗಿ ಕೆಲವು ಮಾತನಾಡಿದ್ದರು. ಆ ಸಮ್ಮೇಳನದಲ್ಲಿ ಗಂಗಾಧರರಾವ್ ದೇಶಪಾಂಡೆ ಮಾತನಾಡಿದ್ದರು. ಗಣಪತಿಶಾಸ್ತ್ರೀ ಎಂಬುವವರು ಅಸ್ಪೃಶ್ಯತೆಗೆ ಶಾಸ್ತ್ರಾಧಾರವಿಲ್ಲವೆಂದು ಸಂಸ್ಕೃತದಲ್ಲಿ ಮಾತನಾಡಿದ್ದರು. ಈ ಎಲ್ಲಾ ಮಾತುಗಳು ಚಂದ್ರಶೇಖರಯ್ಯರಂತಹ ಯುವ ತರುಣರನ್ನು ಸ್ವಾತಂತ್ರ್ಯ ಚಳುವಳಿಯತ್ತ ಸೆಳೆಯುವಲ್ಲಿ, ಅವರಲ್ಲಿ ದೇಶಭಕ್ತಿ ಮೂಡಿಸುವಲ್ಲಿ ಸಹಕಾರಿಯಾಗಿದ್ದವು.

೧೯೨೮ರ ಸುಮಾರಿಗೆ ಕೊಪ್ಪಳ ಜಯರಾಮಾಚಾರ್ಯರು ಶಿವಮೊಗ್ಗದಲ್ಲಿ ನಡೆಸಿದ ಮೂರು ದಿನಗಳ ಕಾಲದ ಹರಿಕಥೆ ಕಾರ್ಯಕ್ರಮ ಜನರಲ್ಲಿ ಅದ್ಭುತ ಪರಿಣಾಮವನ್ನು ಬೀರಿತು. ಇದೇ ವೇಳೆಗೆ ಎಡತೊರೆ ಪಾರ್ಥನಾರಾಯಣ ಪಂಡಿತರು, ಡಾ. ಹರ್ಡೀಕರರು ಶಿವಮೊಗ್ಗದತ್ತ ಬಂದಿದ್ದರು. ಇವರುಗಳ ಮುಂದಾಳತ್ವದಲ್ಲಿ ತೀರ್ಥಹಳ್ಳಿಯಲ್ಲಿ ಸೇವಾದಳದ ಶಿಬಿರಗಳನ್ನು ನಡೆಸಿದ್ದು ಸ್ವರಾಜ್ಯ ಚಳವಳಿಯಲ್ಲಿ ಧುಮುಕಲು ಆಸಕ್ತರಾಗಿದ್ದ ತರುಣರಿಗೆ ಅವಕಾಶ ಒದಗಿಸಿತು. ಸೇವಾದಳಕ್ಕೆ ಎ.ನಾರಾಯಣಭಟ್ಟರು, ಎಸ್.ವಿ.ಕೃಷ್ಣಮೂರ್ತಿರಾಯರು, ಕೂಡಲಿ ಚಿದಂಬರಂರವರು, ಟಿ.ಸುಬ್ಬರಾಯರು, ಪಾರ್ಥನಾರಾಯಣ ಪಂಡಿತರು, ಡಿ.ಆರ್.ಮಾನಪ್ಪ ಇವರೊಟ್ಟಿಗೆ ಚಂದ್ರಶೇಖರಯ್ಯನವರೂ ಸೇರಿಕೊಂಡರು. ಮುಂದೆ ಟಿ.ಸಿ.ಎಸ್.ಮಣಿಯಂ, ಚನ್ನಗಿರಿ ಸೋಮಣ್ಣಶೆಟ್ಟಿ, ಡಾ. ಪಾರ್ಥನಾರಾಯಣ ಪಂಡಿತ್, ವಾಸಪ್ಪ, ಗೋಗಿ, ಡಿ.ಆರ್. ಪುಟ್ಟನಂಜಪ್ಪ, ಮರಿಸ್ವಾಮಿ ಹಿರೇಮಠ, ಎಸ್. ವಿ.ಕೃಷ್ಣಮೂರ್ತಿರಾವ್ ಇವರ ಜೊತೆ ಚಂದ್ರಶೇಖರಯ್ಯನವರು ಸದಸ್ಯರಾಗಿ ರಾಮಕೃಷ್ಣ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಸಮಿತಿ ಆರಂಭಿಸಲಾಯಿತು. ಶಿಕಾರಿಪುರ ತಾಲ್ಲೂಕಿನ ಈಸೂರು ಮೊದಲಾದ ಗ್ರಾಮಗಳಲ್ಲಿ ಹಲವು ವರ್ಷಗಳ ಕಾಲ ಮಳೆಯಾಗದೆ ರೈತರು ಕಂಗಾಲಾಗಿದ್ದರು. ಹಾಗಿದ್ದರೂ ಸರ್ಕಾರ ಕಂದಾಯದಲ್ಲಿ ರಿಯಾಯಿತಿ ನೀಡಿರಲಿಲ್ಲ. ದಿ. ಮರಿಸ್ವಾಮಿ ಹಿರೇಮಠ ಅವರ ನೇತೃತ್ವದಲ್ಲಿ ೧೯೩೧ರಲ್ಲಿ ಅಲ್ಲಿನ ರೈತರು ಕರನಿರಾಕರಣ ಚಳವಳಿಯನ್ನು ಪ್ರಾರಂಭಿಸಿದರು. ಸರ್ಕಾರ ಈ ಕಾರಣಕ್ಕಾಗಿ ಹಿರೇಮಠರನ್ನು ಬಂಧಿಸಿದ್ದಲ್ಲದೆ ಶಿವಮೊಗ್ಗ ಕೋರ್ಟಿನಲ್ಲಿ ಕೇಸು ದಾಖಲಿಸಿದರು. ಮುಂದೆ ಡಾ. ಪಾರ್ಥನಾರಾಯಣ ಪಂಡಿತರು ಹಿರೇಮಠರನ್ನು ಜಾಮೀನಿನ ಮೇಲೆ ಬಿಡಿಸಿಕೊಂಡು ಬಂದರು. ಇದು ಬ್ರಿಟಿಷ್ ಭಾರತದ ಚಳವಳಿಯ ಮಾದರಿಯಲ್ಲಿಯೇ ಮಾರ್ಪಾಡಾಗುತ್ತ ಬಂದಿತು. ಅಂತೆಯೇ ಶಿವಮೊಗ್ಗ ನಗರದ ಮಧ್ಯದಲ್ಲಿ ಸಂತೆ ಮೈದಾನವಿತ್ತು. ಅಲ್ಲಿ ಹೆಂಡದ ಅಂಗಡಿಯೂ ಇತ್ತು. ಸ್ವಾತಂತ್ರ್ಯ ಸಮರದಲ್ಲಿ ಸೇರಲು ಉತ್ಸುಕರಾಗಿದ್ದವರೆಲ್ಲ ಹೆಂಡದಂಗಡಿ ಮುಚ್ಚಿಸಲು ಮುಂದಾದರು. ಡಾ. ಪಾರ್ಥನಾರಾಯಣ ಪಂಡಿತರು, ರಾಮರಾವ್ ಪವಾರ್, ಕೆ.ಟಿ.ಶ್ಯಾಮೇಗೌಡರು, ಡಿ.ಆರ್.ಮಾನಪ್ಪ, ಖಾದಿ ಭಂಡಾರದ ಟಿ.ಸಿ.ಎಸ್.ಮಣಿಯಂ ಮೊದಲಾದವರ ಜೊತೆಗೆ ಚಂದ್ರಶೇಖರಯ್ಯನವರೂ ಸೇರಿ ಈ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡು ಎರಡು ತಿಂಗಳ ಕಾಲ ಪಿಕೆಟಿಂಗ್ ನಡೆಸಿ ಅಂಗಡಿ ಮುಚ್ಚಿಸಲು ಕಾರಣರಾದರು. ಸಂಜೆ ಐದು ಗಂಟೆಯ ನಂತರ ಏಳು–ಎಂಟು ಗಂಟೆಯವರೆಗೆ ಈ ಕಾರ್ಯ ನಡೆಯುತ್ತಿತ್ತು. ಕುಡಿಯಲು ಬರುವವರಿಗೆ ಕೈಜೋಡಿಸಿ, ನಮಸ್ಕರಿಸಿ ಮಹಾತ್ಮರ ಕರೆಗೆ ಓಗೊಟ್ಟು ಕುಡಿಯಬಾರದೆಂದು ಮನವೊಲಿಸಲಾಗುತ್ತಿತ್ತು. ಕುಡುಕರ ಮನೆಗಳಿಗೆ ಬೆಳಗಿನ ಹೊತ್ತು ಪಾನ ನಿರೋಧವನ್ನು ಉಪದೇಶ ಮಾಡಲಾಗುತ್ತಿತ್ತು. ಸಾಯಂಕಾಲದಲ್ಲಿ ಅಂಗಡಿಗಳ ಮುಂದೆ ಕೈಮುಗಿದು ನಿಲ್ಲಲಾಗುತ್ತಿತ್ತು.

ದುಂಡುಮೇಜಿನ ಪರಿಷತ್ತಿನಿಂದ ಮಹಾತ್ಮರು ಮರಳಿದಾಗ ಉತ್ತರ ಕನ್ನಡ ಜಿಲ್ಲೆಯಲ್ಲಿ ಶಿರಸಿ, ಸಿದ್ಧಾಪುರಗಳಲ್ಲಿ ಕರ ನಿರಾಕರಣೆ ಆರಂಭ ಆಗಲು ಅನೇಕರು ಜೈಲು ಸೇರಿದರು. ಇಂಥವರ ಮಕ್ಕಳಿಗೆ ಶಿವಮೊಗ್ಗದಲ್ಲಿ ಬಾಲಕಾಶ್ರಮವನ್ನು ಸ್ಥಾಪಿಸಲಾಯಿತು. ಇದು ಕೃಷ್ಣರಾಜಪುರ ಬಡಾವಣೆಯ ಶಿರಸಿ ಎಂಬ ಮಹನೀಯರ ಮನೆಯಲ್ಲಿ ನಡೆಯುತ್ತಿತ್ತು. ಕರನಿರಾಕರಣ ಚಳವಳಿಯ ಮುಖ್ಯಸ್ಥರಾಗಿದ್ದ ದೊಡ್ಮನೆ ನಾಗೇಶ ಹೆಗಡೆಯವರು ಬರುತ್ತಿದ್ದುದಿತ್ತು. ಶಿವಮೊಗ್ಗದಲ್ಲಿ ಕಟ್ಟಲಾದ ದೊಡ್ಡ ಆಸ್ಪತ್ರೆಗೆ ಮೆಗ್ಗಾನ್ ಎಂಬ ಬ್ರಿಟಿಷ್ ವೈದ್ಯರ ಹೆಸರಿಡಬೇಕೆಂದು ಸರ್ಕಾರ ನಿರ್ಧರಿಸಿತ್ತು. ಇದನ್ನು ಅಂದು ಪ್ರತಿಭಟಿಸಲಾಯಿತು. ಈ ಕುರಿತು ನಡೆದ ಸಭೆಯಲ್ಲಿ ಮಹಾರಾಜರ ಹೆಸರನ್ನು ಆಸ್ಪತ್ರೆಗೆ ಇಡಬೇಕೆಂದು ಪ್ರಜೆಗಳ ಬಯಕೆಯಾಗಿತ್ತು. ಮುಂದೆ ಆಸ್ಪತ್ರೆಯ ಪ್ರಾರಂಭೋತ್ಸವಕ್ಕೆ ಬಂದಂತಹ ಸಂದರ್ಭದಲ್ಲಿಯೂ ರಾಜನಿಷ್ಠರು ಆಸ್ಪತ್ರೆಗೆ ಮಹಾರಾಜರ ಹೆಸರಿಡಬೇಕೆಂದು ಒತ್ತಾಯಿಸಿ, ಆ ಕುರಿತಂತೆ ಕರಪತ್ರಗಳನ್ನು ಮುದ್ರಿಸಿ ಹಂಚಿದ್ದರು. ಇದರ ವಿಚಾರಣೆ ಸುಮಾರು ಎರಡು–ಮೂರು ವರ್ಷಗಳ ಕಾಲ ನಡೆದಾಡಿತು. ೧೯೩೩ರಲ್ಲಿ ಮೈಸೂರು ಅರಮನೆ ಪೈಲ್ವಾನ್ ಕೊಪ್ಪ ಬಸವ ಮತ್ತು ಧಾರವಾಡದ ಗುಲಾಮಿ ಇವರ ನಡುವೆ ನಡೆದ ಕುಸ್ತಿಯೊಂದು ವಾದ ವಿವಾದಕ್ಕೆ ಒಳಗಾಗಿ ಅದರಿಂದ ಹಿಂದೂ ತರುಣರು ಪ್ರತಿಭಟಿಸಿ, ಚೆಟ್ನಿ ಷರೀಫ್ ಎಂಬವನ ಕಾಲು ಮುರಿಯಿತು. ಇನ್ನೊಬ್ಬ ಮುಸ್ಲಿಮನಿಗೆ ಒನಕೆ ಏಟು ತಲೆಗೆ ಬಿದ್ದು ಆತ ಸತ್ತ. ಚೆಟ್ನಿ ಷರೀಫನಿಗೆ ಸುತ್ತಲ ಹಳ್ಳಿಯಲ್ಲಿ ಬೆಂಬಲವಿತ್ತು. ಅವರೆಲ್ಲ ನುಗ್ಗಿ ಬಂದು ಗಲಾಟೆ ಪ್ರಾರಂಭಿಸಿದರು. ಅದು ಮೊಹರಂ ಕಾಲವಾಗಿತ್ತು. ಆಗ ಪೊಲೀಸರ ಬಂದೋಬಸ್ತ್ ಇತ್ತು. ಗಲಭೆಯಾದ ಮರುದಿನ ಹಿಂದೂ ಮತ್ತು ಮುಸ್ಲಿಂ ಎಂದು ಭೇದವಿಲ್ಲದೆ ಗಾಯಾಳುಗಳನ್ನು ಆಸ್ಪತ್ರಗೆ ಸೇರಿಸಲಾಯಿತು. ಈ ಘಟನೆಯಲ್ಲಿ ಹಲವರ ಮೇಲೆ ಕೇಸು ದಾಖಲಾಗಿ ಕೋರ್ಟು ಕಛೇರಿ ಅಲೆಯುವ ಪರಿಸ್ಥಿತಿ ಬಂದಿತ್ತು.

ಏಪ್ರಿಲ್ ೨೭ಕ್ಕೆ ಮಹಾತ್ಮರಿಂದ ಬಂದಿದ್ದ ಸಂದೇಶವನ್ನು ಮುದ್ರಿಸಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಂದ ರಾಜ್ಯಾದ್ಯಂತ ಹಂಚಲ್ಪಟ್ಟಿತು. ಅವರ ಸೂಚನೆಯಂತೆ ಐವರ ಪ್ರಥಮ ಬಲಿದಾನ ಪಡೆ ರಚಿತವಾಯಿತು. ಅದರ ಅಧ್ಯಕ್ಷರಾಗಿ ಚಿತ್ರದುರ್ಗದ ಭೀಮಪ್ಪನಾಯಕರು ಇದ್ದರು. ತಗಡೂರು ರಾಮಚಂದ್ರರಾಯರು ಮತ್ತು ಇನ್ನೊಬ್ಬರು ಸದಸ್ಯರಾಗಿದ್ದರು.



ಚಂದ್ರಶೇಖರಯ್ಯನವರು ಇದರ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ವಿದುರಾಶ್ವತ್ಥಕ್ಕೆ ರಾಷ್ಟ್ರಧ್ವಜ ಸಹಿತ ಯಾತ್ರೆ ಹೊರಟು, ಮಿಲಿಟರಿಯವರಿಗೆ ಧ್ವಜಾರೋಹಣಕ್ಕೆ ಅವಕಾಶ ಕೊಡಿ ಇಲ್ಲವೇ ಗುಂಡಿಕ್ಕಿ ಕೊಲ್ಲಿ ಎಂಬ ಸವಾಲನ್ನು ಒಡ್ಡುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಗಾಂಧೀಜಿಯವರು ಸೂಚಿಸಿದ್ದಂತೆ ಅವರ ವಿನಾ ಇತರರ್ಯಾರೂ ಪತ್ರಿಕೆಗಳಿಗೆ ಹೇಳಿಕೆ ಕೊಡದಂತೆ ಕಾರ್ಯಕರ್ತರಲ್ಲಿ ಕೇಳಿಕೊಳ್ಳಲಾಗಿತ್ತು. ಹಾಗಿದ್ದರೂ ಒಬ್ಬ ಕಾರ್ಯಕರ್ತನು ಮಹಾತ್ಮರ ನೇರ ಮಾರ್ಗದರ್ಶನದಂತೆ ಚಳವಳಿ ನಡೆಯುವುದು ಎಂಬ ಮಾತಿಗೆ ಬದಲಾಗಿ ಮಹಾತ್ಮರೇ ನಾಯಕತ್ವ ವಹಿಸುವರೆಂದು ತಪ್ಪು ಹೇಳಿಕೆ ಕೊಟ್ಟಿದ್ದು ಅದು ದೇಶದ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅನಂತರ ಗಾಂಧೀಜಿಯವರು ತಿದ್ದುಪಡಿಯನ್ನು ಕೊಟ್ಟಿದ್ದಿದೆ. ಬಲಿದಾನ ಪಡೆಗಳ ಸತ್ಯಾಗ್ರಹದ ಸುದ್ದಿ ದಿವಾನರನ್ನು ಗಾಬರಿಗೊಳಿಸಿತ್ತು. ಅವರು ಸತ್ಯಾಗ್ರಹಿಗಳಿಗೆ ತಮ್ಮನ್ನು ಬಂದು ಕಾಣುವಂತೆ ಹೇಳಿ ಕಳಿಸಿದ್ದರು. ವಿದುರಾಶ್ವತ್ಥದಲ್ಲಿ ಗೋಲೀಬಾರು ಆಗುವುದಕ್ಕೂ ಮುಂಚೆ ಮೈಸೂರುಧ್ವಜ ಹಾಗೂ ರಾಷ್ಟ್ರಧ್ವಜ ಇವೆರಡನ್ನೂ ಒಟ್ಟಾಗಿ ಹಾರಿಸಿ ಜವಾಬ್ದಾರಿ ಸರಕಾರಕ್ಕಾಗಿ ಚಳವಳಿ ಮುಂದುವರೆಸಲು ಆದೇಶ ನೀಡಿ ಮಹಾತ್ಮರು ಸ್ವಹಸ್ತದ ಪತ್ರವನ್ನು ಜೈಲಿನಲ್ಲಿರುವ ಕಾಂಗ್ರೆಸ್ ಅಧ್ಯಕ್ಷರಿಗೆ ನೀಡಿದ್ದರು.

ಆಗಸ್ಟ್ ೯, ೧೯೪೨ರಂದು ಮುಂಬೈಯಲ್ಲಿ ಗಾಂಧೀಜಿ, ಆಜಾದ್, ಪಂಡಿತ್ ನೆಹರು ಮತ್ತು ಇತರ ಮುಖಂಡರು ದಸ್ತಗಿರಿಯಾದ ನಂತರ ಮೈಸೂರು ಸಂಸ್ಥಾನದಲ್ಲಿಯೂ ಕಾಂಗ್ರೆಸ್ ಮುಖಂಡರ ಬಂಧನ ಪ್ರಾರಂಭವಾದ ಸುದ್ದಿ ಹಳ್ಳಿ ಹಳ್ಳಿಯ ಮೂಲೆಯವರೆಗೆ ಹಬ್ಬಿತು. ಇದರ ಪರಿಣಾಮವಾಗಿ ಜಿಲ್ಲೆಯಲ್ಲಿ ಕೂಲಿಕಾರರು, ಕಾಂಗ್ರೆಸ್‌ಗಾಗಿ ಕೆಲಸ ಮಾಡುತ್ತಿದ್ದ ಕಾರ್ಯಕರ್ತರು, ವಿದ್ಯಾರ್ಥಿಗಳು ತಮ್ಮ ಅಸಂತೋಷವನ್ನು ವ್ಯಕ್ತಪಡಿಸುವುದರ ಸಲುವಾಗಿ ಅಲ್ಲಲ್ಲಿ ಬಹಿರಂಗ ಸಭೆ, ಸಮಾರಂಭ, ಮುಷ್ಕರ, ಹರತಾಳ ಮೊದಲಾಗಿ ಹಲವು ಕಾರ್ಯಕ್ರಮಗಳನ್ನು ಅಹಿಂಸಾತ್ಮಕ ತತ್ವವನ್ನಾಧರಿಸಿ ಸರ್ಕಾರದ ವಿರುದ್ಧ ಪ್ರತಿಭಟನೆಗಳನ್ನು ಹಮ್ಮಿಕೊಂಡರು. ಪ್ರತಿಯೊಬ್ಬ ಪ್ರಜೆಯೂ ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಮುಂದಾಗಿದ್ದರು. ಇದು ಭಾರತ ಸ್ವಾತಂತ್ರ್ಯ ಹೋರಾಟದ ಸೋಗಿನಲ್ಲಿ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಒತ್ತಾಯ ಮಾಡಲಾಗುತ್ತಿತ್ತು. ಎಲ್ಲ ಕಡೆಗಳಲ್ಲಿ ನಡೆದಂತೆ ಶಿವಮೊಗ್ಗ ಜಿಲ್ಲೆಯಲ್ಲಿಯೂ

ವಿದ್ಯಾರ್ಥಿಗಳು ಧೈರ್ಯದಿಂದ ಈ ಹೋರಾಟದಲ್ಲಿ ಪಾಲ್ಗೊಳ್ಳುವುದರ ಮೂಲಕ ಕೈಜೋಡಿಸಿದರು. ಅವರು ಸರ್ಕಾರದ ದಬ್ಬಾಳಿಕೆಯನ್ನು ಎದುರಿಸಲು ಪ್ರತಿಭಟನೆಯನ್ನು ಅಹಿಂಸಾತ್ಮಕವಾಗಿ ಎದುರಿಸಿದರು. ಸಾಗರ, ಶಿವಮೊಗ್ಗ, ತೀರ್ಥಹಳ್ಳಿ, ನ್ಯಾಮತಿ ಈ ಮೊದಲಾದ ಸ್ಥಳಗಳಲ್ಲಿ ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಯವರನ್ನು ವಿರೋಧ ಹಾಕಿಕೊಳ್ಳುವುದರ ಮೂಲಕ ಪ್ರತಿಭಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇದರಿಂದ ಅವರು ತೊಂದರೆ ಅನುಭವಿಸುವಂತಾಯಿತು. ಇವರ ಈ ಕಾರ್ಯಾಚರಣೆಗಳು ಹೆಚ್ಚಾದಾಗ ಸರ್ಕಾರ ಪೊಲೀಸ್ ಬಲ ಪ್ರಯೋಗಿಸಿ ಇವರನ್ನು ದಸ್ತಗಿರಿ ಮಾಡುವುದರ ಮೂಲಕ ಹೆದರಿಸಲು ಪ್ರಯತ್ನಿಸಿದರು. ಆದರೂ ಇವರು ಹಿಂಜರಿಯದೆ ಕಾಂಗ್ರೆಸ್ ಧ್ವಜವನ್ನು ಎತ್ತಿ ಹಿಡಿಯುವುದರ ಮೂಲಕ ಸ್ವಾತಂತ್ರ್ಯಕ್ಕೆ ಮುನ್ನುಡಿಯಿಟ್ಟ ಕಾಂಗ್ರೆಸ್ ಕೆಲಸಕ್ಕೆ ಧ್ವನಿಯಾಗಿ ನಿಂತಿದ್ದರು. ಅಂತೆಯೇ ಜಿಲ್ಲೆಯ ಭದ್ರಾವತಿಯಲ್ಲಿ, ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿದ್ದ ಕೂಲಿಕಾರರು ತಮ್ಮ ಸ್ವಪ್ರೇರಣೆಯಿಂದ ಮುಷ್ಕರದಲ್ಲಿ ಪಾಲ್ಗೊಂಡರು. ಸರ್ಕಾರ ಆ ಸಂದರ್ಭದಲ್ಲಿ ಕಾರ್ಖಾನೆಗಳನ್ನು ಮುಚ್ಚಿತು. ಕೂಲಿಕಾರರನ್ನು ಸಮಾಧಾನ ಪಡಿಸಲು ಒಪ್ಪಂದಕ್ಕೆ ಮುಂದಾಗದೆ ಅವರನ್ನು ಕೆಣಕಿ ನೋಡಿದರು. ಕೂಲಿಕಾರರ ಸಮಿತಿಯು ಸರ್ಕಾರದ ವರ್ತನೆಯನ್ನು ಖಂಡಿಸಿದ್ದಲ್ಲದೆ ಬೇಡಿಕೆ ಒಪ್ಪುವವರೆಗೆ ಯಾವ ಕಾರಣಕ್ಕೂ ಕೆಲಸಕ್ಕೆ ಹೋಗಬಾರದೆಂದು ನಿರ್ಧರಿಸಿದ್ದರು. ಕಾರಣವಿಲ್ಲದೆ ದಸ್ತಗಿರಿಗಳು ಪ್ರಾರಂಭವಾದ್ದರಿಂದ ಶಾಂತಿ ವಾತಾವರಣ ಕದಡಿತ್ತು. ದೌರ್ಜನ್ಯದ ಮೂಲಕ ಕೆಲಸದವರನ್ನು ಗಡಿಪಾರು ಮಾಡಲಾಯಿತು. ಮಕ್ಕಳು ಮತ್ತು ಹೆಂಗಸರನ್ನು ಕಂಪೆನಿ ಮನೆಗಳಿಂದ ಹೊರಕ್ಕೆ ಕಳುಹಿಸಲಾಯಿತು. ಸುಮಾರು ಎರಡು, ಮೂರು ತಿಂಗಳು ನಡೆದ ಈ ಮುಷ್ಕರದಲ್ಲಿ ಸುಮಾರು ೯೬ ಜನರು ಕೆಲಸ ಕಳೆದುಕೊಳ್ಳುವಂತಾಯಿತು. ೩೪ ಜನರು ದಸ್ತಗಿರಿಗೆ ಒಳಗಾದರು. ೬ ಜನರು ಕೆಲಸದಿಂದ ಡಿಬಾರ್ ಆದರು. ಈ ಕೆಲಸಕ್ಕಾಗಿ ಮಿಲಿಟರಿಯವರನ್ನು ಬಳಸಿದ್ದಲ್ಲದೆ ಕುದುರೆಗಳ ಮೇಲೆ ಭರ್ಜಿ, ಬಂದೂಕು ಇತ್ಯಾದಿ ಆಯುಧಗಳನ್ನು ತೋರಿಸುವ ಮೂಲಕ ಪ್ರತಿ ಮನೆಗೂ ಹೋಗಿ ಕೂಲಿಕಾರರನ್ನು ಹೆದರಿಸಿ ಕೆಲಸಕ್ಕೆ ಬರುವಂತೆ ಮಾಡಲಾಯಿತು. ಅಲ್ಲದೆ ಹಲವಾರು ಗುಪ್ತಚಾರರನ್ನು ಬಿಟ್ಟು ನಿರ್ಬಂಧಕಾಜ್ಞೆಗಳ ಮೂಲಕ ಚಳುವಳಿ ವಿಚಾರವನ್ನು ಜನರು ಮಾತನಾಡದಂತೆ ಭದ್ರಾವತಿಯಲ್ಲಿ ಕ್ರಮ ಕೈಗೊಳ್ಳಲಾಗಿತ್ತು. ಆ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಮುಖಂಡರ ದಸ್ತಗಿರಿ



ಮಾಡಲಾಗಿತ್ತು. ಕಾಂಗ್ರೆಸ್ ಕೆಲಸಗಾರರು ಗುಪ್ತ ಸ್ಥಳಗಳಲ್ಲಿ ಅಡಗಿಕೊಳ್ಳುವ ಸ್ಥಿತಿ ಬಂದಿತ್ತು. ವಿದ್ಯಾರ್ಥಿಗಳು ತಮ್ಮ ತರಗತಿಗಳನ್ನು ಬಹಿಷ್ಕರಿಸಿ ಅಹಿಂಸಾ ಮಾರ್ಗದಲ್ಲಿ ಹರತಾಳದಲ್ಲಿ ಭಾಗವಹಿಸಿದರು. ಆದರೆ ವಿದ್ಯಾರ್ಥಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳಲು ಸರ್ಕಾರ ಹಿಂಜರಿದಿತ್ತು. ಪ್ರಭಾತ್ ಫೇರಿ, ಬಹಿರಂಗ ಸಭೆಗಳು, ಖಂಡನಾ ಸಭೆಗಳು, ನಿಧಿ ಸಂಗ್ರಹ ಕಾರ್ಯ ಮೊದಲಾದ ಕೆಲಸಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ಸ್ವಾತಂತ್ರ್ಯದ ಕೆಲಸಕ್ಕೆ ಸಹಕರಿಸುತ್ತಿದ್ದರು. ಕೂಲಿಕಾರರು ಕಾರ್ಖಾನೆಗಳನ್ನು ಮುಚ್ಚಿಸಿದ್ದಲ್ಲದೆ, ಸರ್ಕಾರದ ಹಲವು ಕಾನೂನಿನ ಅಡಿಯಲ್ಲಿ ಶಿಕ್ಷೆಯನ್ನು ಅನುಭವಿಸುವಂತಾಯಿತು. ಇವರು ಅಹಿಂಸಾ ಮಾರ್ಗದಲ್ಲಿಯೇ ಮುಂದುವರಿದು ಸರ್ಕಾರದ ದಬ್ಬಾಳಿಕೆಯನ್ನು, ಅನೀತಿಯನ್ನು ಎದುರಿಸಿದರು. ಸಂತೆಗಳಲ್ಲಿ ಸುಂಕ ಕೊಡಬಾರದೆಂದು ಪ್ರಚಾರ ನಡೆದು ಅಲ್ಲಲ್ಲಿ ಕೆಲವು ಕಡೆ ಸುಂಕ ಕೊಡುವುದು ನಿಲ್ಲಿಸಲ್ಪಟ್ಟಿತು. ಹೆಂಡದ ಅಂಗಡಿಗಳು ಮುಚ್ಚಿಸಲ್ಪಟ್ಟವು. ಅಲ್ಲಲ್ಲಿ ಕಾಣಿಸುತ್ತಿದ್ದ ಈಚಲುಮರಗಳನ್ನು ಕಡಿದುಹಾಕಲಾಯಿತು. ಅಧಿಕಾರಿಗಳ ವಾಹನಗಳನ್ನು ನಿಲ್ಲಿಸಲಾಯಿತು. ಟೆಲಿಗ್ರಾಂ, ವೈರ್, ಟೆಲಿಫೋನ್, ಸೇತುವೆ ಇತ್ಯಾದಿಗಳನ್ನು ಕೆಡಿಸುವ ಕೆಲಸ ನಡೆಯಿತು. ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ನಡೆಯಿತು. ಯಾರನ್ನೇ ದಸ್ತಗಿರಿ ಮಾಡಲು ಹೋದರೂ ಅವರು ಹೆದರದೆ ಅವರ ದಸ್ತಗಿರಿಗೆ ಸಿಕ್ಕು ಸೆರೆವಾಸ ಅನುಭವಿಸಲು ಮುಂದಾಗಿದ್ದರು. ಆ ಮೂಲಕ ಸರ್ಕಾರದ ದಬ್ಬಾಳಿಕೆಯನ್ನು ಎದುರಿಸಲಾಯಿತು. ಹಾಗಾಗಿ ಎಲ್ಲಿ ನೋಡಿದರೂ ವಿದ್ಯಾರ್ಥಿಗಳು, ಕಾರ್ಮಿಕರು ಕಾಣಿಸುತ್ತಿದ್ದರು. ಮಹಾತ್ಮ ಗಾಂಧೀಜಿಯವರು ಯಾವುದೇ ಕರೆ ಕೊಟ್ಟರೂ ಅದನ್ನು ನಡೆಸಲು ಎಲ್ಲರೂ ಸಿದ್ಧರಿರುತ್ತಿದ್ದರು. ಈಸೂರಿನಲ್ಲಿ ನಡೆದ ಘಟನೆಯಿಂದ ಹಲವು ಮೊಕದ್ದಮೆಗಳು ರೈತರ ಮೇಲಿದ್ದವು. ಅವು ಸಾಗರ, ಶಿವಮೊಗ್ಗ ನ್ಯಾಯಾಲಯದಲ್ಲಿ ನಡೆಯುತ್ತಿದ್ದವು. ಅದರ ಖರ್ಚು ವೆಚ್ಚಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಿ ನಡೆಸಲಾಗುತ್ತಿತ್ತು.

ಆಗಿನ್ನೂ ಸರ್ಕಾರ ಯಾವುದೇ ನಿಷೇಧಾಜ್ಞೆಯನ್ನು ಜಾರಿ ಮಾಡಿರಲಿಲ್ಲ. ಒಮ್ಮೆ ಜಾರಿಗೆ ಮಾಡಿದ್ದಲ್ಲಿ ಅದನ್ನು ವಿರೋಧಿಸಿ ಮುನ್ನುಗ್ಗುವ ಮನಸ್ಥಿತಿಯನ್ನು ಎಲ್ಲರೂ ಹೊಂದಿದ್ದರು. ಮುಖಂಡರ ದಸ್ತಗಿರಿ, ದಿನಾಚರಣೆ, ಹರತಾಳಗಳು, ಖಂಡನಾ ಸಭೆಗಳು, ಅಹಿಂಸಾತ್ಮಕ ಚಳುವಳಿಯನ್ನು ಹೂಡಲು ಬಹಿರಂಗ

ಭಾಷಣಗಳು, ಹಳ್ಳಿಗಳ ಪ್ರಚಾರ ಎಲ್ಲವೂ ಅಂದು ಬಿರುಸಾಗಿ ನಡೆದಿದ್ದವು. ಹೆಂಡದಂಗಡಿ ಮುಚ್ಚಿಸುವುದು, ಶಾಲೆಗಳ ಬಹಿಷ್ಕಾರ ಇವೆಲ್ಲವೂ ನಿರಂತರವಾಗಿ ನಡೆದಿದ್ದವು. ೧೯೪೨ನೇ ಅಕ್ಟೋಬರ್‌ನಲ್ಲಿ ಗಾಂಧಿ ಜಯಂತಿಯು ಸಾರ್ವಜನಿಕರನ್ನು ಆಕರ್ಷಿಸಿದ್ದಲ್ಲದೆ ಅವರ ಮೇಲಿನ ಪ್ರೀತಿ ವಿಶ್ವಾಸಕ್ಕೆ ಅದು ಸಾಕ್ಷಿಯಾಗಿ ನಿಂತಿತು. ಒಮ್ಮೆ ಹುಡುಗರು ಅಮೆರಿ ಸತ್ತನೆಂದು ಅವನ ಮಾದರಿಯನ್ನು ಮಾಡಿಕೊಂಡು ರಸ್ತೆಯಲ್ಲಿ ಸುಟ್ಟಿದ್ದರು. ಇದರಿಂದ ರೊಚ್ಚಿಗೆದ್ದಿದ್ದ ಪೊಲೀಸರು ಗುಂಡು ಹಾರಿಸಲು ಅಂದಿನ ಜಿಲ್ಲಾಧಿಕಾರಿ ನವನೀತಂ ನಾಯ್ಡು ಅವರ ಮುಖಂಡತ್ವದಲ್ಲಿ ಬಂದು ಸೇರಿದ್ದರು. ಇದನ್ನು ನೋಡಲು ಸಾವಿರಾರು ಜನರು ಸೇರಿದ್ದರು. ಜನರನ್ನು ನೋಡಿ ಜಿಲ್ಲಾಧಿಕಾರಿಗಳು ಹಿಂತಿರುಗುವಂತಾಗಿತ್ತು. ಭದ್ರಾವತಿಯಲ್ಲಿ ಸಹ ಸಾಕಷ್ಟು ದಸ್ತಗಿರಿಗಳು ನಡೆದಿದ್ದವು. ಈ ಮುಷ್ಕರದ ಕಾಲದಲ್ಲಿ ಸುಮಾರು ಏಳೆಂಟು ಸಾವಿರ ರೂಪಾಯಿಗಳ ಹಣವನ್ನು ಕೊಡುವುದರ ಮೂಲಕ ಸಹಾಯಹಸ್ತ ನೀಡಲಾಯಿತು.

## ಹೋರಾಟದಲ್ಲಿ ಚನ್ನಗಿರಿಯ ಪಾತ್ರ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧಿಯವರರಿಂದ ಸ್ಫೂರ್ತಿ ಪಡೆದ ಚನ್ನಗಿರಿ ತಾಲ್ಲೂಕಿನ ಯುವಕರು ತಮ್ಮದೇ ಆದ ರೀತಿಯಲ್ಲಿ ಅವರ ಕೈಗೆ ಬಲ ಕೊಟ್ಟಿದ್ದಾರೆ. ಕಂದಾಯ ಕೊಡದೆ ಪ್ರತಿಭಟಿಸುವುದು, ಜೈಹಿಂದ್ ಘೋಷಣೆ ಕೂಗುವುದು, ಮದ್ಯದಂಗಡಿ ಬಹಿಷ್ಕಾರ, ಅಂಚೆ ಕಛೇರಿ ಸುಡುವುದು, ವಿದೇಶಿ ವಸ್ತುಗಳನ್ನು ಸುಡುವುದು, ಜಿಲ್ಲಾ ಆಡಳಿತಗಾರರ ವಿರುದ್ಧ ಹೋರಾಟ, ಪ್ರತಿಭಟನೆ, ಹರತಾಳ, ಸತ್ಯಾಗ್ರಹ ಇತ್ಯಾದಿ ಕೆಲಸದಲ್ಲಿ ಭಾಗವಹಿಸಿದ್ದರು. ಇದಕ್ಕೆ ಚಾಲನೆ ಸಿಕ್ಕಿದ್ದು ಮಹಾತ್ಮ ಗಾಂಧಿಯವರು ಶಿವಮೊಗ್ಗಕ್ಕೆ ಬಂದ ಮೇಲೆ. ಡಿ.ರಾಮಪ್ಪ ದೇ.ಹಳ್ಳಿ, ಹೋದಿಗ್ಗೆರೆ ಎನ್. ಎಲ್.ಕಲ್ಲಪ್ಪ ಈ ಪ್ರತಿಭಟನೆಯ ಮಾರ್ಗದರ್ಶನದಲ್ಲಿ ಇದ್ದವರು. ತಾಲ್ಲೂಕಿನ ಎಸ್. ಯು. ಕೃಷ್ಣಮೂರ್ತಿರಾಯರು, ನಲ್ಲೂರು ಸುಮತೀಂದ್ರರು, ಜೆ.ಹೆಚ್.ಪಟೇಲ್‌ರವರು, ಕುಂದೂರು ರುದ್ರಪ್ಪ, ದೇವನಹಳ್ಳಿ ಸಿದ್ಧಪ್ಪ, ಸಂತೆಬೆನ್ನೂರಿನ ನಾಡಿಗ ನರಸಿಂಹಮೂರ್ತಿ, ಮಠದ ಜಯದೇವಯ್ಯ, ಮರಬನಹಳ್ಳಿ ಚನ್ನಪ್ಪ, ಅಜ್ಜಿಹಳ್ಳಿ ಮರುಳಪ್ಪ, ವಿ.ಸಿದ್ಧಪ್ಪ, ದೇವಮ್ಮ, ತ್ಯಾವರಕೆರೆ ಚಲ್ಲಪ್ಪ, ಟಿ.ವಿ.ಚಂದ್ರಶೇಖರಪ್ಪ, ಬೆಳಗಲಿ ಬಿಳಿಯಪ್ಪ ಮುಂತಾದವರು ಗಾಂಧಿ ಟೋಪಿ ಧರಿಸಿ ಪ್ರತಿಭಟನೆ ಮಾಡುತ್ತಿದ್ದರು. ಬ್ರಿಟಿಷ್ ಧ್ವಜ ಸುಡುವುದು, ಕಛೇರಿಗಳಿಗೆ ಬೆಂಕಿ ಹಚ್ಚಿ ಪ್ರತಿಭಟಿಸಿ



ಹಲವಾರು ಜನ ಜೈಲುವಾಸ ಅನುಭವಿಸಿದರು. ಭಾರತಕ್ಕೆ ಸ್ವಾತಂತ್ರ್ಯ ೧೯೪೭ರಲ್ಲಿ ಬಂದರೂ, ಮೈಸೂರು ಪ್ರಾಂತ್ಯಕ್ಕೆ ಸ್ವಾತಂತ್ರ್ಯ ಬಂದಿರಲಿಲ್ಲ. ೧೯೪೮ ರಲ್ಲಿ ಮೈಸೂರು ಪ್ರಾಂತ್ಯದ ಚಳುವಳಿ ತೀವ್ರವಾಯಿತು. ಅಲ್ಲಲ್ಲಿ ವಂದೇ ಮಾತರಂ ಘೋಷಣೆಯೊಂದಿಗೆ ಚಳುವಳಿಯನ್ನು ನಡೆಸಿದರು. ಚನ್ನಗಿರಿ ತಾಲ್ಲೂಕಿನಲ್ಲಿ ಹಳ್ಳಿ ಪ್ರಚಾರ ಚೆನ್ನಾಗಿ ನಡೆದು ಕೆಲವರು ದಸ್ತಗಿರಿಯಾಗಿದ್ದರು. ಹೊನ್ನಾಳಿಯ ನ್ಯಾಮತಿಯಲ್ಲಿ ಮತ್ತು ಹಳ್ಳಿಗಳಲ್ಲಿ ಬಹಿರಂಗ ಸಭೆಗಳು ನಡೆದದ್ದಲ್ಲದೆ ಎಲ್ಲ ಕಡೆ ನಡೆಯುವಂತೆ ಹೆಂಡದಂಗಡಿ ಪಿಕೆಟಿಂಗ್, ಶಾಲಾ ಬಹಿಷ್ಕಾರ ನಡೆದಿತ್ತು. ಅಲ್ಲಿ ಸುಮಾರು ೪೧ ಜನರು ಜೈಲು ಸೇರುವಂತಾಗಿತ್ತು. ಬಹಿರಂಗವಾಗಿ ಕೆಲಸ ಮಾಡುತ್ತಿದ್ದವರನ್ನು ದಸ್ತಗಿರಿ ಮಾಡಿರಲಿಲ್ಲ. ಯಾವ ನಿಷೇಧಾಜ್ಞೆಗಳನ್ನೂ ಅಲ್ಲಿ ಜಾರಿಗೆ ತಂದಿರಲಿಲ್ಲ. ಸರ್ಕಾರಿ ಅಧಿಕಾರಿಗಳು ಪೊಲೀಸನವರು ಹಳ್ಳಿಗೆ ಹೋಗಲು ಹೆದರುತ್ತಿದ್ದರು. ಶಿಕಾರಿಪುರ ತಾಲ್ಲೂಕಿನಲ್ಲಿ ಎಲ್ಲ ಹಳ್ಳಿಗಳಿಗೆ ಕಾಂಗ್ರೆಸ್ ಕೆಲಸಗಾರರು ಪ್ರವಾಸ ಮಾಡಿ ಸಂದೇಶವನ್ನು ಸಾರಿ ಜನಜಾಗೃತಿ ಮಾಡುತ್ತಿದ್ದರು. ಸರ್ಕಾರಿ ಅಧಿಕಾರಿಗಳೆಂದು ಹೇಳಿಕೊಳ್ಳುತ್ತಿದ್ದ ಅನೇಕ ಪಟೇಲರು ತಮ್ಮ ಪಟೇಲಗಿರಿಗೆ ರಾಜೀನಾಮೆ ನೀಡಿ ಹರತಾಳದಲ್ಲಿ ಪಾಲ್ಗೊಂಡಿದ್ದರು. ಕುಸ್ಕೂರಿಗೆ ಜಿಲ್ಲಾಧಿಕಾರಿಗಳಾದ ನವನೀತಂ ನಾಯ್ಡು, ತಾಲ್ಲೂಕು ಇನ್‌ಸ್ಪೆಕ್ಟರ್ ಅವರೊಂದಿಗೆ ಬಂದು ಕಾರಣವಿಲ್ಲದೆ ಹೆಚ್.ಕೆ.ಬೂದ್ಯಪ್ಪಗೌಡ ಅವರನ್ನು ಚಾಟಿಯಿಂದ ಪೋಲೀಸರು ದಾಸಪ್ಪ ಎಂಬುವವನಿಗೆ ಹೊಡೆಯಲಾಗಿ ಅವರು ಸ್ಮೃತಿತಪ್ಪಿ ಬೀಳಲು, ಹಳ್ಳಿಯ ಜನರೆಲ್ಲ ಸೇರಿದರು. ಬೂದ್ಯಪ್ಪಗೌಡರು ಪಟೇಲಗಿರಿಗೆ ರಾಜೀನಾಮೆ ಕೊಟ್ಟಿದ್ದರು. ಅವರನ್ನು ಹೆದರಿಸಲು ಪ್ರಯತ್ನ ನಡೆಯಿತು. ಹಳ್ಳಿ ಜನರೆಲ್ಲಾ ಸೇರಿ ಪ್ರಶ್ನಿಸಲಾಗಿ, ಎಲ್ಲರನ್ನೂ ಸುಟ್ಟುಬಿಡುತ್ತೇವೆಂದು ಹೆದರಿಸಿದರು. ಅಲ್ಲಿಗೆ ಬಂದಿದ್ದ ಅಧಿಕಾರಿಗಳು ಬಂದಿಲ್ಲವೆಂದು ಮಾಡುವ ಶಕ್ತಿ ಹಳ್ಳಿಯವರಲ್ಲಿತ್ತು. ಬೂದ್ಯಪ್ಪಗೌಡರು ಯಾವ ಅನರ್ಥಕ್ಕೂ ಅವಕಾಶ ಕೊಡದೆ ಅಧಿಕಾರಿಗಳ ರಕ್ಷಣೆಯನ್ನು ಮಾಡಿ ಅವರೊಡನೆ ಹೋಗಿ ದಸ್ತಗಿರಿ ಆದರು.

ಸೊರಬ ತಾಲ್ಲೂಕಿನಲ್ಲಿ ಪಟೇಲರ ರಾಜೀನಾಮೆಯು ಭರದಿಂದ ಸಾಗುತ್ತಿತ್ತು. ಸರ್ಕಾರದವರು ನಡೆಸಿದ ಈಸೂರು ಗೋಲೀಬಾರ್ ಆದ ನಂತರ ಮುಖಂಡರ ದಸ್ತಗಿರಿಯಾಯಿತು. ೧೫ ಗ್ರಾಮಗಳಲ್ಲಿ ಪಟೇಲರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟದ್ದರಿಂದ ಅವರ ದಸ್ತಗಿರಿಯಾಯಿತು. ಮಳಲಗದ್ದೆ

ಪುಟ್ಟಪ್ಪಗೌಡರನ್ನು ಜಿಲ್ಲೆಯಿಂದ ಗಡಿಪಾರು ಮಾಡಿದ್ದರು. ತೆಲಗುಂದ ಮಲ್ಲನಗೌಡರಿಗೆ ಕಂಡಲ್ಲಿ ಗುಂಡು ಹಾಕಲು ಆಗ ಆಜ್ಞೆಯಾಗಿತ್ತು. ಸಾಗರ ತಾಲ್ಲೂಕಿನಲ್ಲಿ ಸಿದ್ದಾಪುರ ತಾಲ್ಲೂಕು ಸಂಪರ್ಕ ಕಮ್ಮಿ ಮಾಡುವ ಸಲುವಾಗಿ ಮತ್ತು ಮೈಸೂರಿಗೆ ಸಹಾಯ ಬರದಂತೆ ನೋಡಿಕೊಳ್ಳುವುದಕ್ಕಾಗಿಯೂ, ಮಲೆನಾಡಿನಲ್ಲಿ ಇದ್ದ ಒಂದೊಂದೇ ಮನೆಗಳಲ್ಲಿ ಇದ್ದ ಜನರನ್ನು ಹೆದರಿಸಿಟ್ಟುಕೊಳ್ಳಲು ಪೊಲೀಸ ಮತ್ತು ಮಿಲಿಟರಿ ಓಡಾಟ ಹೆಚ್ಚಾಗಿತ್ತು. ಕಾಗೋಡಿನ ಕೆ.ಜಿ.ಒಡೆಯರ್ ಅವರ ಮನೆಯಲ್ಲಿ ಆರು ಬಾರಿ ಪೊಲೀಸರು ಜಪ್ತಿ ಮಾಡಿದ್ದರು. ಅಲ್ಲದೆ ಕೆ.ಜಿ.ಒಡೆಯರ್ ಮತ್ತು ಗಂಗಾಧರ್ ಅವರನ್ನು ದಸ್ತಗಿರಿ ಮಾಡಿದ್ದರು. ಅವರ ಬಂದೂಕನ್ನು ಸರ್ಕಾರದವರು ವಶಪಡಿಸಿಕೊಂಡಿದ್ದರು. ಅವರ ತಮ್ಮ ಗುರುವಯ್ಯ ಎಂಬುವವರನ್ನು ದಸ್ತಗಿರಿ ಮಾಡಲು ಪ್ರಯತ್ನಿಸಿ ಕೊನೆಗೆ ದಸ್ತಗಿರಿ ಮಾಡದೆ ಹಾಗೇ ಬಿಟ್ಟಿದ್ದರು.

ಮಲೆನಾಡು ಪ್ರಾಂತವಾದ ನಗರ ತಾಲ್ಲೂಕಿನಲ್ಲಿ ಹೆಚ್ಚು ಕಾರ್ಯಕ್ರಮಗಳು ನಡೆಯದಿದ್ದರೂ ಹೊರನಗರ ಪ್ರದೇಶದಲ್ಲಿ ಬಹಿರಂಗ ಸಭೆಗಳು, ಪ್ರಭಾತ್ ಫೇರಿ, ಕಾರ್ಯಕ್ರಮಗಳು ನಡೆದು ಸಹಾನುಭೂತಿಯನ್ನು ವ್ಯಕ್ತಪಡಿಸಲಾಗಿತ್ತು. ಆ ಸಂದರ್ಭದಲ್ಲಿ ಹುಂಚ ಮೊದಲಾದ ಕಡೆಗಳಲ್ಲಿ ಈ ಕೆಲಸದಲ್ಲಿ ಪಾಲ್ಗೊಂಡಿದ್ದ ಕೆಲವರನ್ನು ಬಂಧಿಸಲಾಗಿತ್ತು. ಬಗನೀಮರದ ಕಡಿತಲೆ, ಹೆಂಡದಂಗಡಿ ಪಿಕೇಟಿಂಗ್, ಜನಜಾಗೃತಿ ಭಾಷಣಗಳು ಮೊದಲಾದವು ತೀರ್ಥಹಳ್ಳಿ ತಾಲ್ಲೂಕಿನಲ್ಲಿಯೂ ನಡೆದವು.. ಅಲ್ಲಿ ಊರಿನವರೇ ಅಧಿಕಾರಿಗಳಿಗೆ ಅಸಹಕಾರವನ್ನು ತೋರಿಸಿದ್ದರು. ಇದರಿಂದ ಅಧಿಕಾರಿಗಳು ಹೆದರುವಂತಾಗಿತ್ತು. ಅಲ್ಲಿಯೂ ಶಾಲೆಗಳು ಮುಚ್ಚಲ್ಪಟ್ಟಿದ್ದವು. ತೀರ್ಥಹಳ್ಳಿಯಲ್ಲಿ ಹರತಾಳ ನಡೆದಲ್ಲಿ ಒಂದು ಪೈಸೆಯೂ ವ್ಯಾಪಾರ ಆಗದಂತೆ ನಡೆಯುತ್ತಿತ್ತು. ಇದರಲ್ಲಿ ಹೆಂಗಸರು, ಮಕ್ಕಳು ಮುದುಕರಾದಿಯಾಗಿ ಭಾಗವಹಿಸುತ್ತಿದ್ದರು. ಜಿಲ್ಲಾಧಿಕಾರಿಗಳು ತಮ್ಮ ಸಂಗಡ ಸಾಕಷ್ಟು ಪೊಲೀಸ್ ಇಟ್ಟುಕೊಂಡು ಹೋಗುವ ಪರಿಸ್ಥಿತಿ ಅಲ್ಲಿತ್ತು. ಹಾಗಾಗಿ ಅಲ್ಲಿ ಒಬ್ಬರನ್ನು ದಸ್ತಗಿರಿ ಮಾಡುವುದು ಕಷ್ಟವಾಗಿತ್ತು. ಮೋಸದಿಂದ ಮಾತ್ರ ದಸ್ತಗಿರಿ ಮಾಡಬಹುದಾಗಿತ್ತು. ಇಲ್ಲಿ ಜಬರದಸ್ತು ನಡೆಸದೆ ಅಧಿಕಾರ ನಡೆಸುವ ಸ್ಥಿತಿ ಅಧಿಕಾರಿಗಳದ್ದಾಗಿತ್ತು. ಶಿವಮೊಗ್ಗ ಜಿಲ್ಲೆಯಾದ್ಯಂತ ೧೯೪೨, ೪೩, ೪೪ರಲ್ಲಿ ವಿಜೃಂಭಣೆಯಿಂದ ಗಾಂಧೀಜಿ ಜಯಂತಿ ನಡೆಸಲಾಗಿತ್ತು. ಆಗ ಅನ್ನದಾನ, ಖಾದಿ, ಚರಕಗಳ ಪ್ರಚಾರ ಮೊದಲಾಗಿ ರಚನಾತ್ಮಕ ಕೆಲಸಗಳನ್ನು



ಹಮ್ಮಿಕೊಳ್ಳಲಾಗಿತ್ತು. ಹೀಗೆ ಜಿಲ್ಲೆಯಲ್ಲಿ ಯಾವುದೇ ರೀತಿಯಲ್ಲಿ ಹಿಂಜರಿಯದೆ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಯಶಸ್ಸನ್ನು ಸಂಪಾದಿಸಲಾಗಿತ್ತು.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ೧೯೪೨ರ ಕ್ವಿಟ್ ಇಂಡಿಯಾ ಅಥವಾ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳುವಳಿ ಒಂದು ಮಹತ್ವದ ಹಂತ. ಇದನ್ನು ಕೊನೆಯ ಹೋರಾಟ ಎಂದು ಕರೆಯುವುದುಂಟು. ೧೮೫೭ರಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಗುವುದಕ್ಕೂ ಸುಮಾರು ೬೦ ವರ್ಷಗಳ ಮೊದಲು ಕರ್ನಾಟಕದಲ್ಲಿ ಸ್ವಾತಂತ್ರ್ಯ ಕ್ರಾಂತಿಯ ಕಿಡಿ ಹೊತ್ತಿತ್ತು. ಧೋಂಡಿಯಾ ಎಂಬ ಅಪ್ರತಿಮ ಹೋರಾಟಗಾರ ಬ್ರಿಟಿಷ್ ವಿರುದ್ಧ ಕಹಳೆ ಪ್ರಾರಂಭಿಸಲು ಮುಂದಾಗಿದ್ದ ಎಂದರೆ ಅದು ತಪ್ಪಾಗಲಿಕ್ಕಿಲ್ಲ.

**ಚನ್ನಗಿರಿಯ ಧೋಂಡಿಯಾವಾಘ್**

ಅಪ್ರತಿಮ ಹೋರಾಟಗಾರನೂ, ಛಲಗಾರ, ಸಾಹಸಿ, ವೀರ, ಶೂರನೂ ಆಗಿದ್ದ ಧೋಂಡಿಯಾ ವಾಘ್ ಸಾಮಾನ್ಯನಂತಿದ್ದರೂ ಅಸಾಮಾನ್ಯ ವ್ಯಕ್ತಿಯಾಗಿ ರೂಪುಗೊಂಡಿದ್ದ, ಗುರುತಿಸಿಕೊಂಡಿದ್ದ. ಕರ್ನಾಟಕದ ಇತಿಹಾಸದಲ್ಲಿ ಅಚ್ಚಳಿಯದೆ ಇರಬೇಕಾದ ಹೆಸರು, ಇಂದು ಅಪರಿಚಿತವಾಗಿ ಹೋಗಿದೆ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಪ್ರತಿ ವರ್ಷ ವಿಜಯದಶಮಿಯಂದು ಮರಡಿಗಿ ತಾಂಡದ ಶ್ರೀ ಆಂಜನೇಯ ದೇವಾಲಯದ ಮುಂಭಾಗದಲ್ಲಿ ನಡೆಯುವ ಬನ್ನಿ ಕಡಿಯುವ ಸಂದರ್ಭದಲ್ಲಿ ಧೋಂಡಿಯಾ ಬಳಸಿದ್ದ ಖಡ್ಗವನ್ನು ಈಗಲೂ ಬಳಸುವುದು ರೂಢಿಯಲ್ಲಿದೆ. ಅದು ಹೊರತುಪಡಿಸಿ ಉಳಿದಂತೆ ಅವನ ಕುರಿತು ಹೆಚ್ಚಿನ ಮಾಹಿತಿ ಕನ್ನಡದಲ್ಲಿ ಅಲಭ್ಯವೆಂದೇ ಹೇಳಬೇಕು. ಆದರೆ ಇಂಗ್ಲಿಷ್ ದಾಖಲೆಗಳಲ್ಲಿ, ಮರಾಠ ಸಾಹಿತ್ಯದಲ್ಲಿ ನಮಗೆ ಧೋಂಡಿಯಾ ಕುರಿತು ಅಲ್ಪ ಸ್ವಲ್ಪ ಮಾಹಿತಿ ಸಿಗುತ್ತದೆ. ಇನ್ನು ಮರಾಠ ಮೋಡಿ ದಾಖಲೆಗಳಲ್ಲಿಯೂ ಈ ಕುರಿತು ಮಾಹಿತಿ ಅಡಗಿದ್ದು ಅದರ ಅಧ್ಯಯನ ಆಗಬೇಕಿದೆ. ಧೋಂಡಿಯಾ ಉತ್ತರದ ಕಡೆಯಿಂದ ಬಂದವನು ಎಂದು ಹೇಳುವುದಿದೆ. ಆದರೆ ಇವನು ಅಪ್ಪಟ ಕನ್ನಡಿಗ. ಕೌಶಲ್ಯದಿಂದ ಅವನಿಗೆ 'ವಾಘ್' ಎಂದು ಮರಾಠಿ ಪದದಿಂದ ಗುರುತಿಸಲಾಗಿದೆ. ವಾಘ್ ಎಂದರೆ ಹುಲಿ ಎಂಬ ಅರ್ಥವಿದೆ.

ಆರೂವರೆ ಅಡಿ ಎತ್ತರದ ಭೀಮಕಾಯನಾದ ಪೊದೆಮೀಸೆಯ ಧೋಂಡಿಯ ಮದಗಜದಂತಿದ್ದ. ಧೋಂಡಿಯ ಮೂಲತಃ ಹಿಂದಿನ ಶಿವಮೊಗ್ಗ ಜಿಲ್ಲೆಯ, ಇಂದಿನ ದಾವಣಗೆರೆ ಜಿಲ್ಲೆಯ ಚನ್ನಗಿರಿಯವನು. ೧೭೪೫ರ ಸುಮಾರಿನಲ್ಲಿ ಒಂದು ಸಾಮಾನ್ಯ ಮರಾಠ ಕುಟುಂಬದಲ್ಲಿ ಜನಿಸಿದ ಧೋಂಡಿಯ ತನ್ನ ಬಂಡಾಯದ ಮನೋಭಾವವನ್ನು ಕೇವಲ ಒಂದು ಸಂಸ್ಥಾನದ ಸೀಮೆಗೆ, ಸಮುದಾಯಕ್ಕೆ ಸೀಮಿತಗೊಳಿಸದೆ ಒಬ್ಬ ರಾಷ್ಟ್ರೀಯ ಜನನಾಯಕನಾಗಿ ಸಂಘಟಕನಾಗಿ ಬೆಳೆದು ಬರುವುದರ ಮೂಲಕ ಜನಮಾನಸದಲ್ಲಿ ಉಳಿಯುವಂತಾಗಿದ್ದಾನೆ.

ಹದಿನೆಂಟರ ಹರೆಯನಾಗಿದ್ದ ಧೋಂಡಿಯಾ ಚಿಕ್ಕವನಾಗಿದ್ದಾಗಲೇ ಯುದ್ಧ ಕಲೆಗಳೆನಿಸಿದ್ದ ಕತ್ತಿವರಸೆ, ಕುದುರೆ ಸವಾರಿ, ಮಲ್ಲಯುದ್ಧಗಳಲ್ಲಿ ಪ್ರಾವೀಣ್ಯತೆ ಪಡೆದಿದ್ದ. ಕ್ರಿ.ಶ. ೧೪೯೯ರಿಂದ ೧೭೬೩ರವರೆಗೆ ೨೬೩ ವರ್ಷಗಳ ಕಾಲ ಆಡಳಿತ ನಡೆಸಿದ ಕೆಳದಿ ಅರಸರ ಕೊನೆಯ ರಾಣಿ ವೀರಮ್ಮಾಜಿಯ (೧೭೬೩) ಕಾಲದಲ್ಲಿ, ಕೆಳದಿ ಸೈನ್ಯದಲ್ಲಿ ಸ್ಥಾನವನ್ನು ಪಡೆದುಕೊಂಡಿದ್ದ. ಅದಾಗಲೇ ಅವನ ಕಣ್ಣೆದುರಿನಲ್ಲಿಯೇ ಕೆಳದಿ ಸಂಸ್ಥಾನ ಪತನಗೊಳ್ಳುತ್ತಿತ್ತು. ಅದನ್ನು ಹತ್ತಿರದಿಂದ ಕಂಡಿದ್ದ ಇವನ ಮೇಲೆ ಅದು ಪರಿಣಾಮ ಬೀರಿತ್ತು. ಕೆಳದಿ ಅವನತಿಯ ನಂತರ ಧೋಂಡಿಯ ಹೈದರಾಲಿಯ ಸೈನ್ಯದಲ್ಲಿ ಅಶ್ವದಳದ ನಾಯಕನಾಗಿ ಹಲ ವರ್ಷಗಳ ಕಾಲ ಸೇವೆ ಸಲ್ಲಿಸುವುದರ ಮೂಲಕ ಆಡಳಿತದ ಅನುಭವವನ್ನು ಹತ್ತಿರದಿಂದ ಪಡೆದುಕೊಂಡ. ಪರಕೀಯರಾದ ಬ್ರಿಟಿಷರು ಸಾವಿರಾರು ಮೈಲುಗಳ ದೂರದಿಂದ ಇಲ್ಲಿಗೆ ವ್ಯಾಪಾರಕ್ಕೆಂದು ಬಂದು ಇಲ್ಲಿ ಅಧಿಕಾರ ಸ್ಥಾಪಿಸಿ ನಮ್ಮ ಮೇಲೆ ದಬ್ಬಾಳಿಕೆ ನಡೆಸತೊಡಗಿದ್ದು ಧೋಂಡಿಯನಿಗೆ ಸಹ್ಯವಾಗಿರಲಿಲ್ಲ. ಅವರು ಇಲ್ಲಿಂದ ತೊಲಗದಿದ್ದರೆ ಇಲ್ಲಿನವರಿಗೆ ನೆಮ್ಮದಿ ಇಲ್ಲವೆಂಬುದು ಅವನ ಖಚಿತ ಅಭಿಪ್ರಾಯವಾಗಿತ್ತು. ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಆದ್ಯತೆ ಕೊಡಬೇಕೆಂದು ನಿರ್ಧರಿಸಿದ. ಇದೇ ಕಾರಣಕ್ಕಾಗಿ ಸ್ವಲ್ಪ ಕಾಲ ಹೈದರಾಲಿಯ ಸೈನ್ಯದಲ್ಲಿ ಸೇವೆ ಸಲ್ಲಿಸಿ ಅನಂತರ ಅದನ್ನು ಬಿಡಬೇಕೆಂದಿದ್ದವನು ಅಲ್ಲಿಯೇ ಮುಂದುವರಿದು ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ. ಸರಿಯಾದ ಸಮಯ ಕೂಡಿಬರದಿದ್ದರಿಂದ ತನ್ನ ಛಲವನ್ನು ಮುಂದೂಡಿದ್ದ. ಆ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಎರಡು ಬಾರಿ ಯುದ್ಧ ನಡೆಸಿದ ಮೈಸೂರು ಸೈನ್ಯದಲ್ಲಿ ಟಿಪ್ಪು ಪರವಾಗಿ ಧೋಂಡಿಯನೂ ಯುದ್ಧದಲ್ಲಿ ಭಾಗಿಯಾಗಿದ್ದ. ಆದರೆ ಮುಂದೆ ಮೂರನೆಯ ಯುದ್ಧ ನಡೆಯುವ ಮೊದಲೇ ತನ್ನ ಹಿತೈಷಿಗಳ, ಬೆಂಗಲಿಗರ ಮಾರ್ಗದರ್ಶನ ಪಡೆಯುವುದರೊಂದಿಗೆ ಟಿಪ್ಪು ಸೈನ್ಯದಿಂದ ಹೊರಬಂದು ಲಕ್ಷ್ಮೇಶ್ವರ ದೇಸಾಯಿಯವರಲ್ಲಿ ಆಶ್ರಯ ಕೇಳಿದ. ಧೋಂಡಿಯಾ ಮತ್ತು ಸಂಗಡಿಗರು ತನ್ನಲ್ಲಿ ಆಶ್ರಯ ಕೇಳಿದ್ದು ದೇಸಾಯಿಗೆ ಸಂತೋಷ ತಂದಿತ್ತು. ಟಿಪ್ಪುವಿನ ಸೇನೆಯಿಂದ ಹೊರಬರಲು ಕಾಯುತ್ತಿದ್ದ ಸಾವಿರಾರು ಸೈನಿಕರನ್ನು ತನ್ನೊಂದಿಗೆ ಬರುವಂತೆ ಮನ ಒಲಿಸಲು ಧೋಂಡಿಯಾ ರಹಸ್ಯ ಸಭೆ ಕರೆದ. ಟಿಪ್ಪುವಿನ ಕ್ರೌರ್ಯ, ಬಲವಂತದ ಮತಾಂತರಗಳು, ಸಂಘರ್ಷದ ಸಮಯದಲ್ಲಿ ಶತ್ರುಗಳನ್ನು ನಡೆಸಿಕೊಳ್ಳುವ ರೀತಿ, ಅತ್ಯಾಚಾರ ಮತ್ತು ಅಪಹರಣಗಳು ಹಲವರು ಸೈನಿಕರು ಟಿಪ್ಪುವಿನ ಸೇನೆ ತೊರೆಯುವುದಕ್ಕೆ ಕಾರಣಗಳಾಗಿದ್ದವು. ಸಭೆಯ ಅನಂತರ ಧೋಂಡಿಯ ಮತ್ತು ಅವನ ಸಂಗಡಿಗರು ಲಕ್ಷ್ಮೇಶ್ವರದತ್ತ ಹೊರಡಲು ನಿರ್ಣಯಿಸಿದರು. ಧೋಂಡಿಯಾ ಮತ್ತು ಸಂಗಡಿಗರಿಗೆ ದೇಸಾಯಿಯಿಂದ ಆತ್ಮೀಯ ಸ್ವಾಗತ ದೊರೆಯಿತು. ಕೇವಲ ಆರು ತಿಂಗಳಲ್ಲಿ ಇನ್ನೂ ಒಂದು ಸಾವಿರ ಸೈನಿಕರು ಬಂದು ಜೊತೆಗೂಡಿದರು. ಮರಾಠರಿಗಾಗಲೀ, ಟಿಪ್ಪುವಿಗಾಗಲೀ ಕಪ್ಪ ಕೊಡಬಾರದೆಂದು ದೇಸಾಯಿಯವರಲ್ಲಿ ಧೋಂಡಿಯ ವಿನಂತಿಸಿದ. ಆ ಕಾರಣಕ್ಕೆ ಯಾರಾದರೂ ದಾಳಿ ಮಾಡಿದರೆ, ತಾನು ಅವರನ್ನೆಲ್ಲ ಎದುರಿಸುವುದಾಗಿ ಭರವಸೆ ನೀಡಿದ. ಲಕ್ಷ್ಮೇಶ್ವರದ ದೇಸಾಯಿಗೆ ಸಹಾಯಕನಾಗಿ ಕಾರ್ಯ ನಿರ್ವಹಿಸುತ್ತಿದ್ದ ಧೋಂಡಿಯಾನಿಂದಾಗಿ ದೇಸಾಯಿಯ ಶಕ್ತಿಯೂ ಹೆಚ್ಚಿತ್ತು. ಇದೀಗ ಟಿಪ್ಪು ಬಲಹೀನನಾಗಿರುವುದರಿಂದ ತನ್ನ ಆಕಾಂಕ್ಷೆಗಳನ್ನು ಸಾಕಾರಗೊಳಿಸಲು ಇದು ಸುಸಂದರ್ಭವೆಂದು ಭಾವಿಸಿದ ಧೋಂಡಿಯ ನೇರ ಕಾರ್ಯಾಚರಣೆಗೆ ಇಳಿಯಲು ನಿರ್ಧರಿಸಿದ. ತನ್ನ ಹತ್ತು ಸಾವಿರ ಸೈನ್ಯಬಲದೊಂದಿಗೆ ಹಾವೇರಿಯನ್ನು ಸುಲಭವಾಗಿ ತನ್ನ ಸ್ವಾಧೀನಕ್ಕೆ ತೆಗೆದುಕೊಂಡ. ಸವಣೂರು ಸಹ ಅವನ ಕೈವಶವಾಯಿತು. ಹಿಂದೆ ಕೆಳದಿಯ ಬಂಟನಾಗಿದ್ದ ಧೋಂಡಿಯಾ ಈಗ ಒಡೆಯನಾದ. ಶೀಘ್ರ ನಿರ್ಧಾರ ತೆಗೆದುಕೊಳ್ಳುವ, ಅಷ್ಟೇ ತ್ವರಿತಗತಿಯಲ್ಲಿ ಕಾರ್ಯಗತಗೊಳಿಸುವ ಮತ್ತು ಶತ್ರುವಿನ ಬಲಾಬಲಗಳನ್ನು ತಿಳಿದು ಚಾಕಚಕ್ಯತೆಯಿಂದ ಗೆಲವು ಸಾಧಿಸುವ ಗುಣಗಳು, ಅವನ ದೃಢಕಾಯ, ಕಂಚಿನ ಕಂಠಗಳನ್ನು ಕಂಡವರು ಅವನನ್ನು ಹುಲಿ ಎನ್ನುತ್ತಿದ್ದರು.

ಅಷ್ಟೊತ್ತಿಗಾಗಲೇ ಧೋಂಡಿಯ ಹಲವು ಸಾವಿರ ಸೈನಿಕರನ್ನು

ಒಟ್ಟುಗೂಡಿಸುವುದರ ಮೂಲಕ ಸುಮಾರು ೧೭೯೪ರವರೆಗೆ ಐದಾರು ವರ್ಷಗಳ ಕಾಲ ಅಲ್ಲಿಯ ಸುತ್ತಮುತ್ತಲಿನ ಧಾರವಾಡ, ಹಾವೇರಿ ಸವಣೂರು ಇತ್ಯಾದಿ ಪ್ರದೇಶಗಳಲ್ಲಿ ತನ್ನ ಆಡಳಿತ ನಡೆಸಿದ. ಧೋಂಡಿಯಾನ ಈ ಬೆಳವಣಿಗೆಯನ್ನು ಸಹಿಸದ ಪೇಶ್ವೆ ಅವನನ್ನು ಅಲ್ಲಿಂದ ಹೊರಕಳುಹಿಸಲು ನಿಶ್ಚಯಿಸಿ, ಧೋಂಡೂಪಂತ ಗೋಖಲೆ ಎಂಬುವವನ ಮುಂದಾಳತ್ವದಲ್ಲಿ ಸೈನ್ಯವೊಂದನ್ನು ನಿಯುಕ್ತಿಗೊಳಿಸಿ ಯುದ್ಧಕ್ಕೆ ಕಳುಹಿಸಿಕೊಟ್ಟ. ಅವರಿಬ್ಬರ ನಡುವೆ ಘೋರವಾದ ಯುದ್ಧವೇ ನಡೆಯಿತು. ಪಂತನ ಬಹುದೊಡ್ಡ ಸೈನ್ಯವನ್ನು ಎದುರಿಸಲಾಗದೆ ಧೋಂಡಿಯ ಸೋಲನ್ನು ಅನುಭವಿಸಬೇಕಾಯಿತು. ಅವನನ್ನು ಮೈಸೂರು ಸಂಸ್ಥಾನದ ಕಡೆ ಕಳುಹಿಸಲಾಯಿತು. ತನ್ನನ್ನು ರಕ್ಷಣೆ ಮಾಡಿಕೊಳ್ಳುವ ಸಲುವಾಗಿ ಧೋಂಡಿಯ, ಟಿಪ್ಪುವಿನ ಸಹಕಾರ ಬಯಸಿ ಸಂಧಾನಕ್ಕೆ ಮುಂದಾದ. ಮರುದಿನ ತಾನು ತಂಗಿದ್ದ ಕೊಠಡಿಯ ಹೊರಗೆ ಹೆಚ್ಚಿನ ಸಂಖ್ಯೆಯ ಕಾವಲುಗಾರರು ನೆರೆದಿರುವುದನ್ನು ಧೋಂಡಿಯಾ ಗಮನಿಸಿದ. ತಾನು ತಂಗಿದ್ದ ಕೊಠಡಿಯಲ್ಲಿ ಗೆಳೆಯ ರಾಮೋಜಿಯೊಂದಿಗೆ ಧೋಂಡಿಯ ಚರ್ಚಿಸಿದ. ಟಿಪ್ಪುವಿನ ಕಡೆಯವರು ಧೋಂಡಿಯಾನ ಸೈನಿಕರಿಂದ ಹಣ, ಬಟ್ಟೆ, ಕುದುರೆಗಳು, ಅಯುಧಗಳು ಎಲ್ಲವನ್ನೂ ಕಿತ್ತುಕೊಂಡು ಓಡಿಸಿರುವುದನ್ನು ಹೊರಗಿನ ಕಾವಲುಗಾರರಿಂದ ತಿಳಿದು ಮೋಸ ಹೋದೆನೆಂದು ಅರ್ಥ ಮಾಡಿಕೊಂಡ. ಏನು ಬರುತ್ತದೋ ಎದುರಿಸೋಣ ಎಂದು ನಿಶ್ಚಯಿಸಿದ.

ಇದಾಗಲೇ ಮೂರನೆಯ ಮೈಸೂರು ಯುದ್ಧದ ಸಂದರ್ಭದಲ್ಲಿ ಟಿಪ್ಪುವಿನ ಮಕ್ಕಳು ಬ್ರಿಟಿಷರ ಒತ್ತೆಯಾಳಾಗಿದ್ದರು. ಆ ಮಕ್ಕಳನ್ನು ಬಿಡಿಸಿ ತರುವ ಮತ್ತು ಸವಣೂರನ್ನು ಟಿಪ್ಪು ವಶಕ್ಕೆ ಪಡೆಯುವ, ಆ ಮೂಲಕ ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ಸಹಕಾರಿಯಾಗಿ ಕೆಲಸ ಮಾಡುವ ಭರವಸೆಯನ್ನು ಧೋಂಡಿಯ ಟಿಪ್ಪುವಿಗೆ ನೀಡಿದ್ದಲ್ಲದೆ, ತನ್ನ ಅರಸೊತ್ತಿಗೆಯನ್ನು ಸ್ಥಾಪಿಸಲು ಸಹಕರಿಸುವಂತೆ ಅವನಲ್ಲಿ ಕೇಳಿಕೊಂಡ. ಟಿಪ್ಪು ಧೋಂಡಿಯನಿಗೆ ಆಮಿಷವನ್ನೊಡ್ಡುವುದರ ಜೊತೆಗೆ, ದೊಡ್ಡ ಸಂಭಾವನೆ ನೀಡುವ ಭರವಸೆಯೊಂದಿಗೆ ತನ್ನ ಸೈನ್ಯದಲ್ಲೇ ಉನ್ನತ ಅಧಿಕಾರಿಯಾಗಿ ಕೆಲಸ ಮಾಡಲು ಸೂಚಿಸಿ, ಕೋಟೆಯನ್ನು ಜಹಗೀರಾಗಿ ಕೊಡುವುದಾಗಿಯೂ ತಿಳಿಸಿದ. ಅದಕ್ಕೆ ಬದಲಾಗಿ ಧೋಂಡಿಯ ಮುಸ್ಲಿಮನಾಗಿ ಮತಾಂತರ ಹೊಂದಲು ಮತ್ತು ತಾನು ಸೂಚಿಸುವ ಹೆಣ್ಣಿನೊಂದಿಗೆ ವಿವಾಹವಾಗಬೇಕೆಂಬ ಷರತ್ತು ವಿಧಿಸಿದ. ಹಾಗೆ ಮಾಡಿದರೆ, ನಮ್ಮ ಬಲಗೈ



ಬಂಟರಾಗುತ್ತೀರಿ ಎಂದ. ಸತ್ತರೂ ಸರಿ, ಮತಾಂತರ ಆಗುವುದಿಲ್ಲ ಎಂದು ಧೋಂಡಿಯ ಹೇಳಿದ. ಟಿಪ್ಪುವಿನ ಮಂತ್ರಿ ಮೀರ್ ಸಾದಿಕ್ ಸಂಧಾನದ ನೆಪದಲ್ಲಿ ಹಿಂದೆ ಟಿಪ್ಪುವಿನ ಸೈನ್ಯವನ್ನು ಧೋಂಡಿಯ ಬಿಟ್ಟುಹೋಗಿದ್ದು ನೆನಪಿಸಿದ. ಅದನ್ನು ರಾಜದ್ರೋಹವೆಂದು ಕರೆದ.

ಮರುದಿನ ಟಿಪ್ಪುವಿನ ಅಸ್ಥಾನದಲ್ಲಿ ಹಲವಾರು ಮೌಲ್ವಿಗಳೂ ಉಪಸ್ಥಿತರಿದ್ದರು. ಧೋಂಡಿಯ ಧರಿಸಿದ್ದ ಹನುಮಾನ್ ತಾಯಿತವನ್ನು ಕಿತ್ತೆಸೆದರು. ಹಣೆಯ ಮೇಲಿನ ತಿಲಕವನ್ನು ಅಳಿಸಿದರು. ಅವನ ಮುಖದ ಮೇಲೆ ನೀರು ಸಿಂಪಡಿಸಿ ಕುರಾನ್ ಪಠಣ ಮಾಡಿದರು, ಬಲವಂತವಾಗಿ ಸುನ್ನತ್ ಮಾಡಿದರು. ಧೋಂಡಿಯಾನ ಮೌನವೇ ಎಲ್ಲಕ್ಕೂ ಪ್ರತ್ಯುತ್ತರವಾಗಿತ್ತು. ಮುಂದೆ ಅವನ ಹೆಸರು ಶೇಖ್ ಮುಹಮ್ಮದ್ ಎಂದು ಘೋಷಿಸಿದರು. ಧೋಂಡಿಯ, "ಸುಲ್ತಾನರೇ ನೀವು ತಪ್ಪು ಮಾಡುತ್ತಿದ್ದೀರಿ. ಈ ಧೋಂಡಿಯಾನನ್ನು ನೀವು ಬಲವಂತವಾಗಿ ಮುಸ್ಲಿಮನನ್ನಾಗಿ ಮಾಡಲಾರಿರಿ. ನಾನು ಸಾವಿಗೆ ಹೆದರುವುದಿಲ್ಲ. ನನ್ನ ಧರ್ಮ ಬಿಡುವುದಿಲ್ಲ. ಇದು ನನ್ನ ಅಚಲ ನಿರ್ಧಾರ" ಎಂದು ಹೇಳಿದ. ಟಿಪ್ಪು "ಇವನನ್ನು ಎಳೆದೊಯ್ಯಿರಿ" ಎಂದು ಅಬ್ಬರಿಸಿದ.

ಆದರೆ ಈ ಷರತ್ತಿಗೆ ಧೋಂಡಿಯಾ ಒಪ್ಪದಿದ್ದಾಗ, ಅವನನ್ನು ಟಿಪ್ಪು ಶ್ರೀರಂಗಪಟ್ಟಣದ ನೆಲಮಾಳಿಗೆ ಸೆರೆಮನೆಯಲ್ಲಿ ಬಂಧನಕ್ಕೊಳಪಡಿಸಿದ. ಧೋಂಡಿಯಾನನ್ನು ತಳ್ಳಿದ ಸೆರೆಮನೆ ಅತ್ಯಂತ ಹೊಲಸಾಗಿತ್ತು. ಕೈದಿಗಳು ಶೌಚ ಮಾಡುವ ಸ್ಥಳ ಅದಾಗಿತ್ತು. ಗೆಳೆಯ ರಾಮೋಜಿಯೂ ಅಲ್ಲಿದ್ದ. ಟಿಪ್ಪುವಿಗೆ ಸೆರೆಸಿಕ್ಕಿದ್ದ ಮರಾಠಿ ಸೇನಾಧಿಕಾರಿಗಳಿಗೂ ಇದೇ ದುಸ್ಥಿತಿ ಒದಗಿತ್ತು. ಬೇಸಿಗೆಯಲ್ಲಿ ದಗೆ, ಉಳಿದಂತೆ ಹೆಗ್ಗಣಗಳು ಹಾವುಗಳು ಕ್ರಿಮಿಕೀಟಗಳೇ ಅಲ್ಲಿ ತುಂಬಿದ್ದವು. ಆರು ತಿಂಗಳ ಅನಂತರ ಧೋಂಡಿಯಾ ಮತ್ತು ಇತರ ಕೈದಿಗಳ ಎದುರಿಗೇ ತಪ್ಪಿಸಿಕೊಂಡು ಹೋಗಲು ಯತ್ನಿಸಿದವರನ್ನು ಕತ್ತು ಸೀಳಿ ದಾರುಣವಾಗಿ ಕೊಲ್ಲಲಾಯಿತು. ಕೆಲವು ತಿಂಗಳ ಅನಂತರ ಮತಾಂತರಕ್ಕೆ ಒಪ್ಪದ ಒಬ್ಬ ವರ್ತಕ ಮತ್ತು ಇಬ್ಬರು ಅರ್ಚಕರನ್ನು ಆನೆಗಳ ಹಿಂಗಾಲುಗಳಿಗೆ ಕಟ್ಟಿ ಎಳೆಸಿ ಎಲ್ಲರೆದುರಿಗೆ ಕ್ರೂರವಾಗಿ ಕೊಲ್ಲಲಾಯಿತು. ಧೋಂಡಿಯ ಸೆರೆಮನೆಯಲ್ಲಿ ನಾಲ್ಕು ವರ್ಷ ಅತ್ಯಂತ ಹೀನಾಯವಾಗಿ ಕಳೆಯಬೇಕಾಯಿತು. ೧೭೯೯ರ ಮೇ ತಿಂಗಳಲ್ಲಿ ಟಿಪ್ಪುವಿನ ಪತನಾನಂತರವೇ ಧೋಂಡಿಯ ತಪ್ಪಿಸಿಕೊಂಡು ಹೋಗಲು ಸಾಧ್ಯವಾದುದು.

ಅಲ್ಲಿಂದ ಸುಮಾರು ಐದು ವರ್ಷಗಳ ಕಾಲ, ಅಂದರೆ ೧೭೯೯ರ ಮೇ ೪ ರ ವರೆಗೆ ಟಿಪ್ಪು ಬ್ರಿಟಿಷರಿಂದ ಸೋತು ಹತನಾಗುವವರೆಗೆ, ಧೋಂಡಿಯಾ ಚಿತ್ರಹಿಂಸೆ ಅನುಭವಿಸಿ ಬಂದಿಯಾಗಿ ಸೆರೆಮನೆಯಲ್ಲಿ ಇರಬೇಕಾಗುತ್ತದೆ. ಟಿಪ್ಪು ಯುದ್ಧದಲ್ಲಿ ಸೋತು ಪತನವಾದ ನಂತರ ಆ ಸಂದರ್ಭದ ಗೊಂದಲದ ಲಾಭ ಪಡೆಯುವುದರೊಂದಿಗೆ ಧೋಂಡಿಯ ಅಲ್ಲಿಂದ ತಪ್ಪಿಸಿಕೊಂಡು ಸುರಕ್ಷಿತ ಸ್ಥಳದತ್ತ ಮುನ್ನಡೆಯುವುದರ ಜೊತೆಗೆ, ಧೋಂಡಿಯ ನೇರವಾಗಿ ಚನ್ನಗಿರಿ, ಶಿಕಾರಿಪುರ, ಬಿದನೂರು ಸೀಮೆಯತ್ತ ಧಾವಿಸಿ ಆಶ್ರಯ ಪಡೆದುಕೊಂಡ. ಹೈದರಾಲಿ, ಟಿಪ್ಪು ಇವರುಗಳ ಆಡಳಿತದಿಂದ ಬೇಸತ್ತಿದ್ದ ಈ ಪ್ರದೇಶದ ಜನರು, ಸೈನಿಕರು ಧೋಂಡಿಯನ ನಾಯಕತ್ವ ಒಪ್ಪಿಕೊಂಡಿದ್ದರಿಂದ ಮೊದಲಿನಂತೆ ತನ್ನ ಸೈನ್ಯವನ್ನು ಸಂಘಟಿಸಲು ಮುಂದಾಗಿ ಅದರಲ್ಲಿ ಯಶವನ್ನು ಕಂಡುಕೊಂಡ. ಯಾವುದೇ ಸಂಘರ್ಷವಿಲ್ಲದೆ ಚನ್ನಗಿರಿ, ಶಿವಮೊಗ್ಗ, ತರೀಕೆರೆ, ಚಿತ್ರದುರ್ಗ ಮೊದಲಾದ ಸುತ್ತಮುತ್ತಲಿನ ಕಿಲ್ಲೆದಾರರುಗಳು ಧೋಂಡಿಯನಿಗೆ ನಿಷ್ಠೆ ವ್ಯಕ್ತಪಡಿಸುತ್ತಾ ಬಂದರು. ಹೈದರ್ ಆಲಿಯು ಬಿದನೂರನ್ನು ವಶಪಡಿಸಿಕೊಂಡು ಅದಕ್ಕೆ ಹೈದರ್ ನಗರವೆಂದು ಹೆಸರಿಸಿದ್ದ. ಧೋಂಡಿಯಾ ಆ ಹೆಸರನ್ನು ಮತ್ತೊಮ್ಮೆ ಬದಲಾಯಿಸಿ ಮೊದಲಿನ ಹೆಸರನ್ನಿಟ್ಟು ಗೌರವಿಸಿದ. ಅಲ್ಲಿಂದ ಬ್ರಿಟಿಷರನ್ನು ಹೊಡೆದೋಡಿಸಲು ಕ್ರಮ ಕೈಗೊಳ್ಳುವುದರ ಮೂಲಕ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಧೋಂಡಿಯಾ ಕಾಡತೊಡಗಿದ. ಅದಕ್ಕಾಗಿ ಸುತ್ತಮುತ್ತಲಲ್ಲಿ ಆಡಳಿತ ನಡೆಸುತ್ತಿದ್ದ ಬಳ್ಳಂ ಕೃಷ್ಣಪ್ಪನಾಯಕ, ಸುರಪುರ, ಆನೆಗೊಂದಿಯ ನಾಯಕರು, ವಿಟ್ಲ, ಕೊಲ್ಲಾಪುರ, ತಮಿಳುನಾಡಿನ ದಿಂಡಿಗಲ್ ಅರಸರುಗಳು, ವಿರೂಪಾಕ್ಷಿ, ಪಾಂಡ್ಯನ್ ಸಹೋದರರು, ಮಲಬಾರಿನ ಕೇರಳವರ್ಮರವರೇ ಮೊದಲಾಗಿ ಸಣ್ಣಪುಟ್ಟ ಅರಸರು, ಪಾಳೆಯಗಾರರನ್ನು ಸಂಪರ್ಕಿಸಿ, ಬ್ರಿಟಿಷ್ ಆಧಿಪತ್ಯದ ವಿರುದ್ಧ ದಂಗೆ ಏಳಲು ಪ್ರಚೋದನೆಗೆ ಮುಂದಾದ. ಇದು ಬ್ರಿಟಿಷರಿಗೆ ಆತಂಕವನ್ನು ಉಂಟುಮಾಡಿತು. ಇವನನ್ನು ಹೀಗೆಯೇ ಬಿಟ್ಟಲ್ಲಿ ತಮ್ಮ ಅಸ್ತಿತ್ವಕ್ಕೆ ಮುಂದೆ ತೊಂದರೆ ಆಗುವುದೆಂಬುದನ್ನು ಅರಿತು ಅವರು ಧೋಂಡಿಯಾನನ್ನು ಮಣಿಸಲು ಆರ್ಥರ್ ವೆಲ್ಲೆಸ್ಲಿಯ ನೇತೃತ್ವದಲ್ಲಿ ಒಂದು ವಿಶೇಷ ಸೈನ್ಯಪಡೆಯನ್ನು ನಿಯೋಜಿಸಲಾಯಿತು. ಧೋಂಡಿಯಾ ತಲೆಯ ಮೇಲೆ ದೊಡ್ಡ ಮೊತ್ತದ ಬಹುಮಾನವನ್ನೂ ಘೋಷಿಸಿದರು. ಧೋಂಡಿಯ ತನ್ನ ಸೈನ್ಯವನ್ನು ಮೂರು ಭಾಗ ಮಾಡಿ, ಎರಡನ್ನು ದೊಡ್ಡವಾಡ



ಮತ್ತು ಜಾಲಿಹಾಳಗಳಿಗೆ ಕಳುಹಿಸಿ, ಇನ್ನೊಂದನ್ನು ಮಲಪ್ರಭಾ ನದಿಯನ್ನು ದಾಟಿಸಲು ಹವಣಿಸಿದ. ದೊಡ್ಡ ಸೈನ್ಯದ ತುಕಡಿಗಳೊಂದಿಗೆ ಬಿದನೂರು, ಶಿಕಾರಿಪುರ, ಮಾಸೂರು, ಚಿತ್ರದುರ್ಗದ ಕೋಟೆಗಳನ್ನು ಬ್ರಿಟಿಷರು ಮರು ವಶಪಡಿಸಿಕೊಳ್ಳುವುದರ ಮೂಲಕ ಧೋಂಡಿಯಾನನ್ನು ಎದುರಿಸುವಲ್ಲಿ ಯಶಸ್ವಿಯಾದರು. ಆಗ ಧೋಂಡಿಯ ತನ್ನ ಯುದ್ಧತಂತ್ರ ಬದಲಿಸಿಕೊಂಡು ಮುನ್ನುಗ್ಗಿದ. ಮರಾಠರ ಸರಹದ್ದಿಗೆ ಕಾಲಿರಿಸಿದ್ದ ಧೋಂಡಿಯನನ್ನು ಎದುರಿಸದಿದ್ದಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಅರಿತ ಬ್ರಿಟಿಷ್ ಆಡಳಿತ, ನಿಜಾಮರ ಮತ್ತು ಮರಾಠರ ಜೊತೆಗೆ ಸೇರಿ ಒಟ್ಟಾಗಿ ಧೋಂಡಿಯನನ್ನು ಎದುರಿಸಲು ಮುಂದಾದರು. ಅದಾಗಲೇ ಜನಸಾಮಾನ್ಯರ ಮೆಚ್ಚಿನ ನಾಯಕನಾಗಿ ರೂಪುಗೊಂಡಿದ್ದರಿಂದ ಅವನಿಗೆ ಎಲ್ಲ ಕಡೆಗಳಲ್ಲಿಯೂ ಜನರಿಂದ ಸಹಕಾರ ದೊರೆತಿತ್ತು. ಧೋಂಡಿಯ ಬ್ರಿಟಿಷ್ ಸೈನ್ಯವಿದ್ದ ಸ್ಥಳದಿಂದ ಬಹು ಸನಿಹದಲ್ಲಿಯೇ ಇದ್ದು ಅವರ ಮೇಲೆ ಹಠಾತ್ ದಾಳಿ ಮಾಡುವುದರ ಮೂಲಕ ಅವರ ಶಿಬಿರದಲ್ಲಿದ್ದ ಆಯುಧಗಳು, ಆಹಾರ ಸಾಮಗ್ರಿಗಳನ್ನು ದೋಚುತ್ತಿದ್ದ. ಇದರಿಂದ ಕಂಗೆಟ್ಟ ಬ್ರಿಟಿಷ್ ಅಧಿಕಾರಿಗಳು, ಸೇನೆ ಕಂಗೆಟ್ಟುಹೋಗಿತ್ತು. ಘಟ್ಟದ ಕೆಳಗಿನ ಪ್ರದೇಶ ಮತ್ತು ಘಟ್ಟದ ಮೇಲಿನ ಪ್ರದೇಶಗಳೆರಡೂ ಧೋಂಡಿಯಾನ ಹಿಡಿತದಲ್ಲಿತ್ತು. ಇದು ಅವನಿಗೆ 'ಉಭಯಲೋಕೇಶ್ವರ' ಎಂಬ ಬಿರುದನ್ನು ತಂದುಕೊಟ್ಟಿತ್ತು. ಅಲ್ಲದೆ ಅವನ ಧೈರ್ಯ ಪರಾಕ್ರಮ ಅವನಿಗೆ 'ವಾಘ್' ಅಂದರೆ 'ಹುಲಿ' ಎಂಬ ಅನ್ವರ್ಥಕ ನಾಮವನ್ನು ತಂದುಕೊಟ್ಟಿತ್ತು. ಸುಮಾರು ಒಂದೂವರೆ ವರ್ಷಗಳ ಕಾಲ ಕಣ್ಣಾಮುಚ್ಚಾಲೆ ಆಟ ನಡೆದಿತ್ತು. ಅವನನ್ನು ಸದೆಬಡಿಯಲು ಬ್ರಿಟಿಷರು ಸತತ ಪ್ರಯತ್ನ ನಡೆಸಿದ್ದರು. ಧೋಂಡಿಯ ಹಿಂತಿರುಗಿ ದಕ್ಷಿಣದ ಭಾಗಕ್ಕೆ ಬರದಂತೆ ಬ್ರಿಟಿಷ್, ಮರಾಠಾ ಮತ್ತು ನಿಜಾಮರ ಸೈನ್ಯಗಳು ಸತತ ಪ್ರಯತ್ನ ನಡೆಸಿದವು. ಸ್ಥಳೀಯರ ಸಹಕಾರಿಂದ ಬ್ರಿಟಿಷರ ಚಲನವಲನ ತಿಳಿದುಕೊಳ್ಳುತ್ತಿದ್ದ ಧೋಂಡಿಯ ಸಂಘರ್ಷದ ಹೊರತಾಗಿಯೂ ಅವರಿಗೆ ಸಿಗದಂತೆ ತಪ್ಪಿಸಿಕೊಂಡು ಮುಂದೆ ಹೋಗುತ್ತಿದ್ದ. ಆರ್ಥರ್ ಧೋಂಡಿಯನನ್ನು ಹಿಡಿಯಲು ಟೋರನ್, ಸ್ಟೀವನ್‌ಸನ್ ಮತ್ತು ಪೇಟ್ಕರ್ ಎಂಬ ಮೂವರು ಸೇನಾಪತಿಗಳನ್ನು ಕಳುಹಿಸಿದ. ಧೋಂಡಿಯ ತಂಗಿದ್ದನೆಂಬ ಕೋಟೆ, ಸ್ಥಳಗಳನ್ನೆಲ್ಲ ಶೋಧಿಸುತ್ತ ಅವನ ಕಡೆಯವರನ್ನೆಲ್ಲ ಕೊಲ್ಲುತ್ತ, ಬ್ರಿಟಿಷ್ ಸೇನೆ ದಾಂಧಲೆ ನಡೆಸಿತು. ಕೊನೆಗೆ ಒಬ್ಬ ಸೈನಿಕ ಮತ್ತು ಧೋಂಡಿಯನ ಕೈಲಿ ಅನ್ನ ತಿಂದ

ದ್ರೋಹಿಗಳು ಕೊಟ್ಟ ಸುಳುವಿನ ಮೇಲೆ ಬ್ರಿಟಿಷ್ ಸೇನೆ ಧೋಂಡಿಯನ ಬೆನ್ನುಹತ್ತಿತು. ವೆಲ್ಲೆಸ್ಲಿಯ ದೊಡ್ಡ ಅಶ್ವದಳ ಅನಿರೀಕ್ಷಿತವಾಗಿ ದಾಳಿ ಮಾಡಿದಾಗ, ಧೋಂಡಿಯನ ಸೈನಿಕರು ಮಾಡು ಇಲ್ಲವೇ ಮಡಿ ಎಂಬಂತೆ ಹೋರಾಡಿದರೂ, ಐದು ಸಾವಿರ ಸೈನಿಕರು ಬಲಿದಾನ ಮಾಡಿದರೂ ಪ್ರಯೋಜನ ಆಗಲಿಲ್ಲ. ೧೮೦೦ರ ಸೆಪ್ಟೆಂಬರ್‌ನಲ್ಲಿ ರಾಯಚೂರು ಜಿಲ್ಲೆಯ ಕೋಣಗಲ್ಲಿನಲ್ಲಿ ಧೋಂಡಿಯ ವಾಘ ಮರಾಠರ, ನಿಜಾಮನ ಮತ್ತು ಆಂಗ್ಲರ ಮೂರು ಸೇನೆಗಳನ್ನು ಎದುರಿಸಿ ಹೋರಾಡುತ್ತ, ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ಹಿರೇಕೊಟ್ನೆಕಲ್ ಗ್ರಾಮದಲ್ಲಿ ಬ್ರಿಟಿಷ್ ಸೇನೆಯೊಡನೆ ಮುಖಾಮುಖಿಯಾಗಿ ಅಲ್ಲಿ ನಡೆದ ಭೀಕರ ಸಂಘರ್ಷದಿಂದಾಗಿ ೧೮೦೦ ಸೆಪ್ಟೆಂಬರ್ ೧೦ರಂದು ಬ್ರಿಟಿಷರ ಗುಂಡೇಟಿಗೆ ಹುತಾತ್ಮನಾಗುವಂತಾಯಿತು. ವೆಲ್ಲೆಸ್ಲಿಯ ಒಂದೂವರೆ ವರ್ಷದ ಕಾರ್ಯಾಚರಣೆ ಯಶಸ್ವಿಯಗಿ ಕೊನೆಗೊಂಡಿತ್ತು. ಮೃತದೇಹಗಳನ್ನು ಯಾಪಲಪರವಿ ಎಂಬಲ್ಲಿ ಗೌರವಪೂರ್ಣ ಅಂತ್ಯಸಂಸ್ಕಾರಕ್ಕೆ ಬ್ರಿಟಿಷರು ವ್ಯವಸ್ಥೆ ಮಾಡಿದರು.

ಐಗೂರು ಕೃಷ್ಣಪ್ಪನಾಯಕ ೧೮೦೨ರ ಫೆಬ್ರವರಿಯವರೆಗೂ ಹೋರಾಡುತ್ತ ಕೊನೆಗೆ ವಿದ್ರೋಹಿಗಳಿಂದ ಸೆರೆಸಿಕ್ಕೆ ಗಲ್ಲಿಗೇರಿಸಲ್ಪಟ್ಟ. ಕೊಪ್ಪಳದ ಕೋಟೆಯನ್ನು ಗೆದ್ದುಕೊಂಡು ಬಂಡಾಯ ಹೂಡಿದ (೧೮೧೯) ವೀರಪ್ಪನನ್ನೂ ಬ್ರಿಟಿಷ್ ಸೇನೆ ಕೊಂದಿತು. ೧೮೨೦–೨೧ರಲ್ಲಿ ಬಿದರೆ ಜಿಲ್ಲೆಯ ಸುಳಿಯಳ್ಳಿ ಮತ್ತು ಕೃಷ್ಣಾಪುರಗಳ ದೇಶಮುಖರು ಬಂಡಾಯವೆದ್ದರು. ಶಿವಲಿಂಗಪ್ಪ ದೇಶಮುಖ, ತಿರುಮಲರಾವ್ ಮತ್ತು ಮೇಘಶ್ಯಾಮ್ ದೇಶಮುಖರು ಬಂಡಾಯದ ಮುಂದಾಳಾಗಿದ್ದರು. ೧೮೨೪ರಲ್ಲಿ ಬಿಜಾಪುರ ಜಿಲ್ಲೆಯ ಸಿಂದಗಿಯ ಬಂಡಾಯವನ್ನು ಇಂಗ್ಲಿಷ್ ಸೇನೆ ಕ್ರೌರ್ಯದಿಂದ ಹತ್ತಿಕ್ಕಿತು. ಸಿಂದಗಿಯ ಬಂಡಾಯಗಾರರಾಗಿದ್ದ ದಿವಾಕರ ದೀಕ್ಷಿತ, ರಾವ್ ಜಿ ರಾಸ್ತಿಯ, ಬಾಳಪ್ಪ ದೇಶಪಾಂಡೆ, ಅಲೂಪ ಪಿಂಡಾರಿ, ಶೆಟ್ಟಿಯಪ್ಪ ಮತ್ತು ಶೀನಪ್ಪ ಇವರನ್ನು ಹಿಡಿದುಕೊಟ್ಟವರಿಗೆ ಬಹುಮಾನ ನೀಡುವುದಾಗಿ ಬ್ರಿಟಿಷ್ ಸರಕಾರ ಘೋಷಿಸಿತ್ತು. ನಡೆದ ಹಲವು ಸಂಘರ್ಷಗಳಲ್ಲಿ ಧೋಂಡಿಯನ ಕಡೆಯ ಒಟ್ಟು ಹತರಾದ ಸೈನಿಕರ ಸಂಖ್ಯೆ ಇಪ್ಪತ್ತು ಸಾವಿರಕ್ಕೂ ಹೆಚ್ಚಿತ್ತು. ಸ್ವಇಚ್ಛೆಯಿಂದ ಧೋಂಡಿಯಾನ ಸೈನ್ಯ ಸೇರಲು ಪ್ರಚೋದಿಸುತ್ತಿದ್ದರೆಂಬ ಕಾರಣಕ್ಕೆ ಬ್ರಿಟಿಷರಿಂದ ಸುಮಾರು ಒಂದು ನೂರಕ್ಕೂ ಹೆಚ್ಚು ಸಾಮಾನ್ಯ ಪ್ರಜೆಗಳು ಗಲ್ಲಿಗೇರಿಸಲ್ಪಟ್ಟರು.



ಧೋಂಡಿಯಾನನ್ನು ಹತ್ತಿಕ್ಕಲು ಇಷ್ಟೊಂದು ಸಮಯ ಬೇಕಾಗುತ್ತದೆ ಎಂದುಕೊಂಡಿರಲಿಲ್ಲ. ಟಿಪ್ಪುವಿನ ಹೇಯ ಬಂದಿಖಾನೆಗಳಲ್ಲಿ ಅಷ್ಟು ವರ್ಷ ಇದ್ದ ಒಬ್ಬ ವ್ಯಕ್ತಿ ಹೊರಬಂದ ಕೂಡಲೇ ಅದುಮಿಟ್ಟಿದ್ದ ತನ್ನೊಳಗಿನ ಶಕ್ತಿಯನ್ನು ಅದು ಹೇಗೆ ಮೈಗೂಡಿಸಿಕೊಂಡು ಇಷ್ಟು ದೊಡ್ಡಶಕ್ತಿಯಾಗಿ ಬೆಳೆದ ಎಂಬುದು ಆಶ್ಚರ್ಯದ ಸಂಗತಿ. ಟಿಪ್ಪುವಿನಿಂದ ಆತ ಬಂಧಿಸಲ್ಪಡದೇ ಹೋಗಿದ್ದರೆ ಪರಿಸ್ಥಿತಿ ಹೇಗಿರುತ್ತಿತ್ತೆಂದು ಊಹಿಸಲಾಗದು. ಅವನಿಂದಾಗಿ ಬ್ರಿಟಿಷ್ ಅಧಕಾರಿಗಳು ಎಷ್ಟೋ ರಾತ್ರಿಗಳನ್ನು ನಿದ್ದೆಯಿಲ್ಲದೆ ಕಳೆಯಬೇಕಾಗಿಬಂದಿತು. ಸಕಾಲದಲ್ಲಿ ಅವನಿಗ ನಿರೀಕ್ಷಿತ ಸಹಾಯ ಒದಗಿದ್ದಲ್ಲಿ ಆತ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಬದುಕಿ ಉಳಿಯುತ್ತಿದ್ದ ಮತ್ತು ಬ್ರಿಟಿಷರಿಗೆ ಮತ್ತಷ್ಟು ಪ್ರತಿರೋಧವನ್ನು ಒಡ್ಡುತ್ತಿದ್ದ ಎಂಬುದಾಗಿ ಸ್ವತಃ ಬ್ರಿಟಿಷ್ ಇತಿಹಾಸಕಾರರು ವ್ಯಕ್ತಪಡಿಸಿರುವ ಅಭಿಪ್ರಾಯದಲ್ಲಿ ಅತಿಶಯೋಕ್ತಿಯೇನಿಲ್ಲ ಎನಿಸುತ್ತದೆ.

ಇದು ೧೮೫೭ರಲ್ಲಿ ಭಾರತದಲ್ಲಿ ಪ್ರಥಮ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಯಿತೆಂದು ಹೇಳುತ್ತಿರುವುದಕ್ಕೆ ವ್ಯತಿರಿಕ್ತವಾಗಿ ೬೦ ವರ್ಷಗಳ ಮೊದಲೇ ಸ್ವಾತಂತ್ರ್ಯಕ್ಕಾಗಿ ಕ್ರಾಂತಿಯ ಕಿಡಿಯನ್ನು ಧೋಂಡಿಯಾ ಎಂಬ ವೀರ ಹೊತ್ತಿಸಿದ್ದ ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಇದರ ನಂತರ ೧೮೫೭ರಲ್ಲಿ ಪ್ರಥಮ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಗುತ್ತದೆ.

## ಬೂದಿ ಬಸಪ್ಪನ ಬಂಡಾಯ

ಕಿತ್ತೂರಿನಲ್ಲಿ ಈ ಬಂಡಾಯಗಳ ಸರಣಿ ನಡೆಯುತ್ತಿದ್ದಾಗಲೇ ೧೮೩೦–೩೧ರಲ್ಲಿ ಬಿದನೂರಲ್ಲಿ ಬೂದಿ ಬಸಪ್ಪನೆಂಬ ವ್ಯಕ್ತಿಯ ನಾಯಕತ್ವದಲ್ಲಿ ಬಂಡಾಯವಾಯಿತು. ಬ್ರಿಟಿಷರ ಕಂದಾಯ ವಸೂಲಿ ಮಿತಿಯ ಬಗ್ಗೆ ಅಸಮಾಧಾನ ತಳೆದ ಶಿವಮೊಗ್ಗ ಮತ್ತು ದಕ್ಷಿಣ ಕನ್ನಡದ ರೈತರು ಈ ಬಂಡಾಯದಲ್ಲಿ ವ್ಯಾಪಕವಾಗಿ ಪಾಲುಗೊಂಡರು. ಚಿತ್ರದುರ್ಗ, ತುಮಕೂರು, ಬೆಂಗಳೂರು ಜಿಲ್ಲೆಗಳಲ್ಲೂ ಇದರ ಪ್ರಭಾವ ಕಾಣಿಸಿತು. ಈ ಬಂಡಾಯ ೧೯೩೧ರಲ್ಲೇ ಕೊನೆಗೊಂಡರೂ ಬೂದಿ ಬಸಪ್ಪನ ಬಂಧನ ೧೮೩೪ರಲ್ಲಿ ಆಯಿತು. ಇದರ ಹಿಂದೆಯೇ ೧೮೩೫–೩೭ರಲ್ಲಿ ಕೊಡಗಿನ ಬಂಡಾಯಗಳ ಸರಣಿ ಆರಂಭವಾಯಿತು. ಅಪರಂಪಾರಸ್ವಾಮಿ ಮತ್ತು ಕಲ್ಯಾಣಸ್ವಾಮಿ ಇವರು ಒಬ್ಬರ ಅನಂತರ ಒಬ್ಬರಾಗಿ ತಾವು ಕೊಡಗಿನ ಪದಚ್ಯುತ ರಾಜರ ವಂಶಸ್ಥರೆಂದು

ಹೇಳಿಕೊಂಡು ಬಂಡು ಹೂಡಿ ಬಂಧಿತರಾದರು. ಕಲ್ಯಾಣಸ್ವಾಮಿಯೆಂದು ಹೇಳಿಕೊಂಡು ಕೊಡಗಿನ ಅರಸರ ಹೆಸರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಡು ಹೂಡಿದ. ಬಂಗವಾಡಿಯ ಬಂಗರಸನೂ ಈತನನ್ನು ಸೇರಿಕೊಂಡ. ೧೮೩೭ರ ಮೇ ತಿಂಗಳಿನಲ್ಲಿ ಪುಟ್ಟ ಬಸಪ್ಪನನ್ನು ಬಂಧಿಸಿ ಗಲ್ಲಿಗೇರಿಸಲಾಯಿತು. ಬೆಳ್ಳಾರೆ, ಬಂಟವಾಳ, ಮಂಗಳೂರು, ಕಾಸರಗೋಡುಗಳವರೆಗೂ ಈ ಬಂಡಾಯ ವ್ಯಾಪಿಸಿತ್ತು.

ಸ್ವಾತಂತ್ರ್ಯ ಚಳವಳಿಯು ತನ್ನ ಅತ್ಯಂತಿಕ ರೂಪವನ್ನು ಧರಿಸಿದುದು ಕರನಿರಾಕರಣೆಯ ಸಮಯದಲ್ಲಿಯೇ. ಆ ಸಮಯದಲ್ಲಿ ಆಬಾಲವೃದ್ಧರು, ದನ ಕಾಯುವ ಹುಡುಗರು, ಕಾಡಿನಿಂದ ಉರುವಲು ತಂದು ಮಾರುವವರು, ಅಂಬಿಗರ ಹೆಣ್ಣುಮಕ್ಕಳು ಸಹ ಸ್ವಾತಂತ್ರ್ಯಕ್ಕಾಗಿ ಗಾಂಧಿ ಚಳವಳಿಯಲ್ಲಿ ಕೆಲಸ ಮಾಡಿದರು. ಆ ಕಾಡುಗಳಲ್ಲಿ ಸುತ್ತಾಡುವಂತಹ ಸಂದರ್ಭದಲ್ಲಿ ಪೊಲೀಸರು ದಾಹವನ್ನಾರಿಸಿಕೊಳ್ಳಲು ನೀರನ್ನು ಸಹ ತಾವೇ ಹೊತ್ತುಹೊಂಡು ಹೋಗಬೇಕಾಗುತ್ತಿತ್ತು. ಈ ಚಳುವಳಿಯಲ್ಲಿ ಧನಬಲಕ್ಕಿಂತ ಜನಬಲವೇ ಮುಖ್ಯವಾಗಿತ್ತು. ಆದರೆ, ಸತ್ಯಾಗ್ರಹ ನಡೆಸಲಾಗುತ್ತಿದ್ದ ಕೇಂದ್ರದಿಂದ ಊರೂರಿಗೆ, ಕಾರ್ಯಕರ್ತರಿಗೆ, ರೈತರಿಗೆ, ಜನಸಾಮಾನ್ಯರಿಗೆ ಸುದ್ದಿ ಮುಟ್ಟಿಸುವ ಕೆಲಸ ಮತ್ತು ಆಯಾ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂಬ ಬಗ್ಗೆ ನಿರ್ದೇಶನ ಕಳುಹಿಸುವ ಮಹತ್ವದ ಕೆಲಸಗಳು ಆಬಾಲವೃದ್ಧರಿಂದ ನಿರಂತರವಾಗಿ ತಪ್ಪದೆ ನಡೆಯುತ್ತಿತ್ತು. ಆ ಕ್ಷೇತ್ರದಲ್ಲಿ ಕೆಲಸ ಮಾಡುವವರು ಅನೇಕರು ತಲೆಮರೆಸಿ ಬೇರೆ ಬೇರೆ ಹೆಸರುಗಳನ್ನಿಟ್ಟುಕೊಂಡು ವೇಷಧಾರಿಗಳಾಗಿ ತಿರುಗಾಡುವ ಪರಿಸ್ಥಿತಿಯೂ ಇತ್ತು. ಬ್ರಿಟಿಷರ ಆಡಳಿತಕ್ಕೆ ಒಳಗಾದವರು ಒಂದೇ ಆಡಳಿತಕ್ಕೆ ಒಳಗಾಗಿದ್ದರೆ, ದೇಶೀಯ ಆಡಳಿತದಲ್ಲಿ ವಾಸವಾಗಿದ್ದವರು ಒಂದು ರೀತಿಯ ದ್ವಿಮುಖದಾಸ್ಯದಲ್ಲಿ ಕಾಲ ಕಳೆಯುವ ಪರಿಸ್ಥಿತಿ ಇತ್ತು. ಸಂಸ್ಥಾನಿಕ ಅರಸರ ದಾಸ್ಯ ಒಂದು ಕಡೆಯಾದರೆ, ಅರಸರೇ ಬ್ರಿಟಿಷರಿಗೆ ದಾಸರಾಗಿದ್ದುದರಿಂದ ಆ ದಾಸ್ಯ ಮತ್ತೊಂದು ಕಡೆ ಇತ್ತು. ಸಂಸ್ಥಾನಿ ಪ್ರಜೆಗಳು ನಿಜವಾಗಿಯೂ ಬ್ರಿಟಿಷ್ ಸಾಮ್ರಾಜ್ಯದ ದಾಸರ ದಾಸ್ಯತ್ವದಲ್ಲಿ ತಮ್ಮ ಜೀವನವನ್ನು ಕಳೆಯಬೇಕಾಗುತ್ತಿತ್ತು.

ಎರಡನೆಯ ಮಹಾಯುದ್ಧದ ವೇಳೆಯಲ್ಲಿ ಯೂರೋಪಿನಲ್ಲಿ ಜರ್ಮನಿ ಮತ್ತು ಏಷ್ಯಾದಲ್ಲಿ ಜಪಾನಿನ ವೇಗದ ಯಶಸ್ಸುಗಳಿಂದ ಹತಾಶೆಗೊಂಡ ಬ್ರಿಟಿಷ್ ಸರ್ಕಾರವು ೧೯೪೨ರ ವೇಳೆಗೆ ಭಾರತೀಯರ ಸಕ್ರಿಯ ಸಹಕಾರವನ್ನು ಬಯಸಿತು.



ಅದನ್ನು ಪಡೆಯಲು ಭಾರತದ ರಾಷ್ಟ್ರೀಯ ನಾಯಕರೊಡನೆ ಮಾತುಕತೆಗೆ ಕ್ಯಾಬಿನೆಟ್ ಸಚಿವ ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರ ನೇತೃತ್ವದಲ್ಲಿ ನಿಯೋಗವೊಂದನ್ನು ೧೯೪೨ರ ಮಾರ್ಚ ತಿಂಗಳಲ್ಲಿ ಕಳುಹಿಸಿತು. ಈ ಕ್ರಿಪ್ಸ್‌ರವರು ಮೊದಲಿಗೆ ಬ್ರಿಟನ್ನಿನ ಲೇಬರ್ ಪಾರ್ಟಿಯ ಸದಸ್ಯರು ಮತ್ತು ಭಾರತದ ರಾಷ್ಟ್ರೀಯ ಚಳುವಳಿಯ ಪ್ರಬಲ ಸಮರ್ಥಕರು. ಭಾರತದಲ್ಲಿ ಆದಷ್ಟು ಬೇಗನೆ ಸ್ವರಾಜ್ಯದ ಸ್ಥಾಪನೆ ಮಾಡುವುದು ಬ್ರಿಟಿಷರ ಉದ್ದೇಶವೆಂದು ಕ್ರಿಪ್ಸ್ ಘೋಷಿಸಿದರಾದರೂ, ಅವರ ಮತ್ತು ಕಾಂಗ್ರೆಸ್ ನಾಯಕರ ನಡುವಿನ ಮಾತುಕತೆಯು ವಿಫಲವಾಯಿತು.

ದೇಶದ ಆಡಳಿತವನ್ನು ತತ್‌ಕ್ಷಣವೇ ಭಾರತೀಯರಿಗೆ ವಹಿಸಬೇಕೆಂಬ ಕಾಂಗ್ರೆಸ್‌ನ ಬೇಡಿಕೆಯನ್ನು ಬ್ರಿಟಿಷ್ ಸರ್ಕಾರವು ನಿರಾಕರಿಸಿತು. ಇದು ರಾಷ್ಟ್ರೀಯ ನಾಯಕರ ಅತೃಪ್ತಿ, ಅಸಮಾಧಾನಕ್ಕೆ ಕಾರಣವಾಯಿತು. ಇದೇ ವೇಳೆಗೆ ಮಹಾಯುದ್ಧವು ಬೆಲೆ ಏರಿಕೆ, ಆಹಾರ ವಸ್ತುಗಳ ಕೊರತೆಗಳಂತಹ ಸಮಸ್ಯೆಗಳನ್ನು ಸೃಷ್ಟಿಸಿತು. ಜಪಾನಿಯರ ಭಾರತದೆಡೆಗಿನ ಚಲನೆ ಆತಂಕವನ್ನು ಉಂಟುಮಾಡಿತು. ಭಾರತೀಯ ರಾಷ್ಟ್ರೀಯ ನಾಯಕರಿಗೆ ಫ್ಯಾಸಿಸಂ ಮತ್ತು ನಾಜಿಸಂಗಳ ಕುರಿತು ವಿರೋಧವಿತ್ತು. ಅವುಗಳ ವಿರುದ್ಧ ಹೋರಾಡುವುದರ ಕುರಿತು ಸಹಮತವಿತ್ತಾದರೂ, ದೇಶದಲ್ಲಿ ಸ್ವರಾಜ್ಯ ಸ್ಥಾಪನೆಯಾಗದೆ ಸರ್ವಾಧಿಕಾರದ ವಿರುದ್ಧ ಹೋರಾಡುವುದು ಅಸಾಧ್ಯವೆಂದು ಅವರ ಅಭಿಪ್ರಾಯವಾಗಿತ್ತು.

ಕ್ರಿಪ್ಸ್ ಆಯೋಗದ ನಿರ್ಗಮನದ ನಂತರ ಆಗಸ್ಟ್ ತಿಂಗಳಲ್ಲಿ ಆದ ಬೆಳವಣಿಗೆಗಳು ಗಾಂಧೀಜಿ ಮತ್ತು ಇತರ ನಾಯಕರನ್ನು ತೀವ್ರಗಾಮಿಗಳಾಗಿ ಮಾಡಿದವು. ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡ ಹೇರಲು ಕಾಂಗ್ರೆಸ್ ನಿರ್ಧರಿಸಿತು. ಈ ಹಿನ್ನೆಲೆಯಲ್ಲಿ ೧೯೪೨ರ ಆಗಸ್ಟ್ ೮ರಂದು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಮಿತಿ ಸಭೆ ಸೇರಿತು. ಅಲ್ಲಿ ಗಾಂಧೀಜಿ ನೇತೃತ್ವದಲ್ಲಿ ಪ್ರಸಿದ್ಧ 'ಭಾರತ ಬಿಟ್ಟು ತೊಲಗಿ' ಚಳವಳಿಯ ನಿರ್ಣಯ ಸ್ವೀಕರಿಸಿತು. ಅಹಿಂಸಾತ್ಮಕ ಚಳವಳಿಯ ಮೂಲಕ ಸ್ವರಾಜ್ಯದ ಗುರಿ ಸಾಧಿಸಲು ನಿರ್ಧರಿಸಿತು. ಗಾಂಧೀಜಿಯವರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಅವರು:

ಸಂಪೂರ್ಣ ಸ್ವಾತಂತ್ರ್ಯಕ್ಕೆ ಕಡಿಮೆಯಾದ ಯಾವುದರಿಂದಲೂ ನಾನು ತೃಪ್ತನಾಗುವುದಿಲ್ಲ. ಇಲ್ಲಿ ನಾನು ನಿಮಗೆ ಕೊಡುವ ಒಂದು ಪುಟ್ಟ ಮಂತ್ರವಿದೆ.

ಅದನ್ನು ನೀವು ನಿಮ್ಮ ಹೃದಯಗಳಲ್ಲಿ ಮೇಲೆ ಅಂಕಿತಗೊಳಿಸಿಕೊಳ್ಳಿ ಮತ್ತು ನಿಮ್ಮ ಪ್ರತಿಯೊಂದು ಉಸಿರಾಟವು ಅದಕ್ಕೆ ಅಭಿವ್ಯಕ್ತಿಯನ್ನು ಕೊಡಲಿ. ಆ ಮಂತ್ರವೆಂದರೆ 'ಮಾಡು ಇಲ್ಲವೆ ಮಡಿ'. ನಾವು ನಮ್ಮ ಪ್ರಯತ್ನದಲ್ಲಿ ಭಾರತವನ್ನು ಸ್ವತಂತ್ರಗೊಳಿಸೋಣ ಅಥವಾ ಆ ಪ್ರಯತ್ನದಲ್ಲಿ ಮಡಿಯೋಣ. ನಮ್ಮ ಗುಲಾಮಗಿರಿ ಬೇರೂರುವುದನ್ನು ನೋಡಲು ನಾವು ಬದುಕಿರುವುದು ಬೇಡ" ಎಂಬುದಾಗಿ ಜನರನ್ನುದ್ದೇಶಿಸಿ ಹೇಳಿದ್ದರು.

ಚಳವಳಿಯಲ್ಲಿ ಹಿಂಸೆಯನ್ನು ಬಿಟ್ಟು ಎಲ್ಲಾ ವಿಧಾನಗಳಿಗೂ ಅವಕಾಶವಿದೆ. ಅದು ಬಹಿರಂಗ ಬಂಡಾಯವಾಗಿರಬೇಕೆಂದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಆದರೆ ಭಾರತ ಬಿಟ್ಟು ತೊಲಗಿ ಚಳುವಳಿ ಆರಂಭವಾಗುವುದಕ್ಕೆ ಮೊದಲೇ ಸರ್ಕಾರ ತನ್ನ ಆಯುಧ ಪ್ರಯೋಗಿಸಿತು. ಗಾಂಧೀಜಿ ಮತ್ತಿತರ ನಾಯಕರನ್ನು ಆಗಸ್ಟ್ ೯ರ ಬೆಳಗಿನ ಜಾವದ ವೇಳೆಗೆ ಬಂಧಿಸಿತು. ರಾಷ್ಟ್ರೀಯ ಕಾಂಗ್ರೆಸ್ಸನ್ನು ಕಾನೂನುಬಾಹಿರ ಸಂಸ್ಥೆಯೆಂದು ಘೋಷಿಸಿತು. ಕಾಂಗ್ರೆಸ್ ನಿಧಿಯನ್ನು ಮುಟ್ಟುಗೋಲು ಹಾಕಿಕೊಂಡಿತು. ಈ ಬೆಳವಣಿಗೆಗಳು ಜನರ ತೀವ್ರ ಪ್ರತಿಭಟನೆಗಳಿಗೆ ಕಾರಣವಾದವು. ಇದರಿಂದ ಸ್ವಯಂಪ್ರೇರಿತ ಚಳುವಳಿಗಳು ಆರಂಭವಾದವು. ಮುಖ್ಯ ನಾಯಕರೆಲ್ಲಾ ಬಂಧನದಲ್ಲಿದ್ದುದರಿಂದ ಚಳವಳಿ ಅಹಿಂಸೆಯ ಚೌಕಟ್ಟನ್ನು ಮೀರಿತ್ತು. ಅಲ್ಲದೆ ವಿಸ್ತೃತರೂಪ ಪಡೆಯಿತು. ಭಾರತೀಯರು ಈ ಚಳವಳಿಯಲ್ಲಿ ಪಾಲ್ಗೊಂಡ ರೀತಿ ಬ್ರಿಟಿಷರಿಗೆ ಇನ್ನು ನಾವು ಭಾರತವನ್ನು ದೀರ್ಘಕಾಲ ಆಳುವುದು ಸಾಧ್ಯವಿಲ್ಲ ಎಂಬ ಅರಿವು ಮೂಡಿಸಿತು. ವಿದ್ಯಾರ್ಥಿಗಳು, ಕಾರ್ಮಿಕರು, ರೈತರು ಒಳಗೊಂಡಂತೆ ಅಪಾರ ಜನಸ್ತೋಮ ಈ ಚಳವಳಿಯಲ್ಲಿ ಪಾಲ್ಗೊಂಡಿತು.

ಈ ಚಳವಳಿಯ ಸಂದರ್ಭದಲ್ಲಿ ದೇಶದಾದ್ಯಂತ ಸತ್ಯಾಗ್ರಹಗಳು, ಕಾರ್ಖಾನೆಗಳಲ್ಲಿ ಶಾಲಾ ಕಾಲೇಜುಗಳಲ್ಲಿ, ನಗರ ಕೇಂದ್ರಗಳಲ್ಲಿ, ಗ್ರಾಮಗಳಲ್ಲಿ ಪ್ರತಿಭಟನೆಗಳು ನಡೆದವು. ವಸಾಹತು ಪ್ರಭುತ್ವದ ಸಂಕೇತಗಳಾದ ರೈಲ್ವೆ ಸ್ಟೇಷನ್, ಪೋಸ್ಟ್ ಆಫೀಸ್ ಮತ್ತಿತರ ಸರ್ಕಾರಿ ಕಛೇರಿಗಳ ಮೇಲೆ ದಾಳಿ ಮಾಡಲಾಯಿತು. ಖಜಾನೆಗಳನ್ನು ಧ್ವಂಸಗೊಳಿಸಲಾಯಿತು.

ಉತ್ತರ ಪ್ರದೇಶದಲ್ಲಿ ಬಲ್ಲಿಯ ಜಿಲ್ಲೆಯಲ್ಲಿ, ಬಂಗಾಳದ ಮಿಡ್ನಾಪುರ್ ಜಿಲ್ಲೆಯ ತಾಮ್ಲುಕ್, ಬೊಂಬಾಯಿಯ ಸತಾರಾ ಜಿಲ್ಲೆಯಲ್ಲಿ ಮತ್ತು ಮೈಸೂರು ಸಂಸ್ಥಾನದ ನಮ್ಮ ಶಿವಮೊಗ್ಗ ಜಿಲ್ಲೆಯ ಈಸೂರಿನಲ್ಲಿ ಸತ್ಯಾಗ್ರಹಿಗಳು ಪ್ರತಿಸರ್ಕಾರ ಅಥವಾ ಸಮಾನಾಂತರ ಸರ್ಕಾರಗಳನ್ನು ಸ್ಥಾಪಿಸಿದರು. ಇದಕ್ಕೆ ಪ್ರತಿಯಾಗಿ ಸರ್ಕಾರ ದಮನ ಕಾರ್ಯ ಕೈಗೊಂಡಿತು. ಲಾಠಿ ಮತ್ತು ಗುಂಡುಗಳನ್ನು ಬಳಸಿತು. ಕಾಯ್ದೆಗಳ ಮೂಲಕ ಪತ್ರಿಕೆಗಳನ್ನು ಮೌನಗೊಳಿಸಿತು. ಸಾವಿರಾರು ಜನರನ್ನು ಜೈಲಿಗಟ್ಟಿತು. ಗ್ರಾಮಗಳ ಮೇಲೆ ಪುಂಡುಗಂದಾಯ ವಿಧಿಸಿತು. ಒಂದು ಮೂಲದ ಪ್ರಕಾರ ಈ ಚಳವಳಿಯ ಸಂದರ್ಭದಲ್ಲಿ ಬಲಿದಾನವಾದವರ ಸಂಖ್ಯೆ ಹತ್ತು ಸಾವಿರಕ್ಕೂ ಅಧಿಕ. ಕೊನೆಗೂ ಸರ್ಕಾರ ಮೇಲುಗೈ ಸಾಧಿಸಿ ಈ ಚಳುವಳಿಯನ್ನು ದಮನ ಮಾಡಿತು. ಆದರೆ ಚಳವಳಿಯು ಜನರ ಸ್ವರಾಜ್ಯ ಬೇಡಿಕೆಯ ಆಳವನ್ನು ಮನದಟ್ಟು ಮಾಡಿಕೊಟ್ಟಿತ್ತೆಂಬುದರಲ್ಲಿ ಸಂಶಯವಿಲ್ಲ. ಸರ್ಕಾರ ಭಾರತೀಯ ಜನಸಾಮಾನ್ಯರ ಮನಸ್ಸನ್ನು, ಅವರ ಮೇಲಿನ ಕಾಂಗ್ರೆಸ್ ಪ್ರಭಾವ ಅಥವಾ ಹಿಡಿತವನ್ನು ಅರಿಯುವಲ್ಲಿ ವಿಫಲವಾಗಿತ್ತು. ಜಯಪ್ರಕಾಶ ನಾರಾಯಣ, ಡಾ. ರಾಮಮನೋಹರ ಲೋಹಿಯಾ, ಅರಣಾ ಅಸಫ್ ಆಲಿ ಮೊದಲಾದ ಯುವನಾಯಕರು ಈ ಚಳವಳಿಗೆ ಕ್ರಾಂತಿಕಾರಿ ಸ್ವರೂಪ ನೀಡಿದರು.



ಬ್ರಿಟಿಷರ ದತ್ತು ಸ್ವೀಕಾರ ಕಾಯಿದೆ, ಸಹಾಯಕ ಸೈನ್ಯ ಪದ್ಧತಿ ಮತ್ತು ಅವರ ಒಡೆದು ಆಳುವ ಕುಟಿಲ ನೀತಿಯಿಂದ ಭಾರತದ ಎಲ್ಲ ರಾಜ್ಯಗಳನ್ನೂ ತಮ್ಮ ಅಧೀನಕ್ಕೆ ತೆಗೆದುಕೊಂಡಿದ್ದರೂ ಅದರಲ್ಲಿ ಕೆಲವೊಂದು ರಾಜ್ಯಗಳು ಅವರ ಹಿಡಿತಕ್ಕೆ ಸಿಕ್ಕಿರಲಿಲ್ಲ. ಬ್ರಿಟಿಷರ ರಾಜ್ಯದಾಹ ಮತ್ತು ಆಕ್ರಮಣ ನೀತಿಯೇ ಈ ಹೋರಾಟಗಳಿಗೆ ಮೂಲ. ದೇಶೀಯ ರಾಜರು ತಮ್ಮ ರಾಜ್ಯ ಮತ್ತು ಹಕ್ಕುಗಳನ್ನು ಕಾಯ್ದುಕೊಳ್ಳಬೇಕಾಗಿ ಬಂದಾಗ ಬ್ರಿಟಿಷರ ವಿರುದ್ಧ ಹೋರಾಡಬೇಕಾಯಿತು. ಅದರಲ್ಲಿ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರನ್ನು ನಾವು ಗಮನಿಸಬೇಕಾಗಿದೆ. ದಿನದಿನಕ್ಕೆ ಬೆಳೆಯುತ್ತಿದ್ದ ಬ್ರಿಟಿಷರ ಬಲವನ್ನು ಗಮನಿಸಿದ ಹೈದರ್, ಮರಾಠರ ಮತ್ತು ಹೈದರಾಬಾದಿನ ನಿಜಾಮನ ಸಹಕಾರದೊಂದಿಗೆ ಕೆಲವು ಸಾರಿ ಹೋರಾಡಿದ. ಆದರೆ ಮರಾಠರೂ ನಿಜಾಮನೂ ಬ್ರಿಟಿಷರ ಕಡೆಯೇ ಸೇರಿಹೋದದ್ದು ಹೈದರನ ಹೋರಾಟದ ದಿಕ್ಕನ್ನು ಬದಲಿಸಿತೆನ್ನಬಹುದು. ಹೈದರನ ಅಕಾಲಮರಣ ಬ್ರಿಟಿಷರಿಗೆ ಅನುಕೂಲ ಪರಿಸ್ಥಿತಿಯಾಯಿತು. ಟಿಪ್ಪುಸುಲ್ತಾನ್ ತಂದೆಯಂತೆಯೇ ಹೋರಾಟವನ್ನು ಮುಂದುವರಿಸಿದ. ಆದರೆ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಅತ

ಮರಣವನ್ನಪ್ಪಿದ (೧೭೯೯). ಅವನ ಸಾವಿನೊಂದಿಗೆ ಮೈಸೂರು ರಾಜರಿಗೆ ಮೈಸೂರು ಸಂಸ್ಥಾನದ ಆಧಿಪತ್ಯವು ಮತ್ತೆ ದಕ್ಕಿತು. ಆದರೆ, ಅವರು ಬ್ರಿಟಿಷರ ಅಧೀನ ಸಂಸ್ಥಾನವಾಗಿ ಉಳಿದರು.

ಕರ್ನಾಟಕದಲ್ಲಿಯೂ ಭಾರತ ಬಿಟ್ಟು ತೊಲಗಿ ಚಳುವಳಿ ವಿಸ್ತೃತ ರೂಪ ಪಡೆಯಿತು. ರಾಜ್ಯದಲ್ಲಿ ಈ ಚಳವಳಿಗೆ ಮಾರ್ಗದರ್ಶನ ನೀಡಲು ಸಿ.ಜೆ.ಅಂಬಲಿ ಎಂಬುವವರ ನೇತೃತ್ವದಲ್ಲಿ ಒಂದು ಕ್ರಿಯಾ ಸಮಿತಿ ರಚಿಸಲಾಯಿತು. ವಿದ್ಯಾರ್ಥಿಗಳು, ಕಾರ್ಮಿಕರು, ರೈತರು ಸೇರಿದಂತೆ ಸಾವಿರಾರು ಜನರು ಪಾಲ್ಗೊಂಡರು. ಹಲವಾರು ಸರ್ಕಾರಿ ನೌಕರರು ರಾಜೀನಾಮೆ ನೀಡಿ ಚಳುವಳಿಯಲ್ಲಿ ಭಾಗಿಯಾದರು.

೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯ ಹೊತ್ತಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ರಾಷ್ಟ್ರೀಯ ಚಳುವಳಿ ಆತ್ಯಂತಿಕ ಹಂತ ತಲುಪಿತ್ತು. ಶಿವಮೊಗ್ಗದ ಇತಿಹಾಸ ಅವಲೋಕಿಸಿದರೆ ಇಲ್ಲಿನ ಜನತೆ ೧೭೯೯ರಿಂದ ವಸಾಹತು ಪ್ರಭುತ್ವದ ವಿರುದ್ಧದ ಹೋರಾಟದಲ್ಲಿ ತೊಡಗಿಸಿಕೊಂಡಿದ್ದುದು ಕಂಡುಬರುತ್ತದೆ. ೧೮೩೦–೩೧ರ ನಗರ ಬಂಡಾಯ ಅಥವಾ ರೈತರ ಬಂಡಾಯ ಕಾಂಗ್ರೆಸ್ ಪೂರ್ವ ಸ್ವಾತಂತ್ರ್ಯದ ಹೋರಾಟದಲ್ಲಿ ಪ್ರಮುಖವಾದುದು. ನಂತರ ಕಾಂಗ್ರೆಸ್ ನೇತೃತ್ವದ ವಿವಿಧ ಹೋರಾಟಗಳು ಜಿಲ್ಲೆಗೆ ಪರಿಚಿತವಾದವುಗಳೇ. ಸ್ವಾತಂತ್ರ್ಯ ಹೋರಾಟದ ವೇಳೆಗೆ ಜಿಲ್ಲೆಯು ಮೈಸೂರು ಸಂಸ್ಥಾನದ ಒಂದು ಭಾಗವಾಗಿ ಒಡೆಯರ್ ರಾಜವಂಶದ ಆಳ್ವಿಕೆಗೆ ಒಳಪಟ್ಟಿತ್ತು. ೧೯೪೨ರ ಸಂದರ್ಭದಲ್ಲಿ ಜಿಲ್ಲೆಯ ಜನತೆ ವಿವಿಧ ಹರತಾಳ, ಶಾಲೆಗಳ ಬಹಿಷ್ಕಾರ, ಬಹಿರಂಗ ಸಭೆ, ಟೆಲಿಗ್ರಾಫ್ ಸಂಪರ್ಕ ನಾಶ ಮೊದಲಾದ ಕಾರ್ಯಕ್ರಮಗಳಲ್ಲಿ ಪಾಲುಗೊಂಡಿತು. ಶಾಲಾ ಬಾಲಕರು ಕೂಡಾ ಚಳುವಳಿಯಲ್ಲಿ ಹಿಂದೆ ಬೀಳಲಿಲ್ಲ.

## ಹೋರಾಟದಲ್ಲಿ ಪಾಲ್ಗೊಂಡ ಕೆಲವು ಮಹನೀಯರು

ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಸುಮಾರು ೧೪೪ಕ್ಕೂ ಹೆಚ್ಚು ಮಹನೀಯರು ಪಾಲ್ಗೊಂಡು ಭಾರತವನ್ನು ಬ್ರಿಟಿಷ್ ಮುಕ್ತವಾಗಿಸಲು ತಮ್ಮನ್ನು ತೊಡಗಿಸಿಕೊಂಡವರಾಗಿದ್ದಾರೆ. ಅಂದು ಶಿವಮೊಗ್ಗ ಜಿಲ್ಲೆಯ ಪ್ರಮುಖ ತಾಲ್ಲೂಕುಗಳಲ್ಲಿ ಒಂದಾಗಿದ್ದ ಚನ್ನಗಿರಿ, ಹೊನ್ನಾಳಿ ಇವು ಇಂದು ದಾವಣಗೆರೆ ಜಿಲ್ಲೆಗೆ ಸೇರ್ಪಡೆಗೊಂಡಿವೆ.. ೧೯೩೮ರಿಂದ ಪ್ರಾರಂಭಿಸಿ



ಸ್ವಾತಂತ್ರ್ಯ ಬರುವವರೆಗೆ ಜಿಲ್ಲೆಯಲ್ಲಿ ಆ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹನೀಯರನ್ನು ಇಲ್ಲಿ ಸಂಕ್ಷಿಪ್ತವಾಗಿ ನೆನಪಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಪೂಜಾರಿ ಪರಮೇಶ್ವರಪ್ಪ ಇವರು ೧೯೩೮ರಿಂದ ೪೭ರವರೆಗೆ ಚಳುವಳಿಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ್ದರೆ, ವೈ.ಆರ್.ಪರಮೇಶ್ವರಪ್ಪನವರು ೧೯೩೮ರ ಅರಣ್ಯ ಸತ್ಯಾಗ್ರಹದಲ್ಲಿ ಪಾಲ್ಗೊಂಡವರು. ೪೨ರ ಕ್ವಿಟ್ ಇಂಡಿಯ ಚಳುವಳಿಯಲ್ಲಿ ಭೂಗತರಾಗಿ ಕೆಲಸ ಮಾಡಿದವರು. ೪೭ರಲ್ಲಿ ಮೈಸೂರು ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಪಾತ್ರವಹಿಸಿದವರು. ವೀರಭದ್ರಯ್ಯನವರು ೪೨ರ ಚಲೇಜಾವ್ ಚಳುವಳಿಯಲ್ಲಿ ಭೂಗತರಾಗಿ ಕೆಲಸ ಮಾಡಿ ಸಾಗರ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ್ದರು. ಎಸ್.ಎಲ್.ಶಿವರಾಮ, ಎಸ್.ಎನ್.ಲಕ್ಷ್ಮೀಕಾಂತಪ್ಪನವರು, ಎಂ.ರಂಗಶಾಮಿ, ಬಿ.ವಿಶ್ವನಾಥ್, ಎಸ್.ಹಳದಪ್ಪ, ವಿ.ರಾಜಶೇಖರಯ್ಯ ೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭೂಗತರಾಗಿ ಕೆಲಸ ಮಾಡಿ, ೪೭ರ ಮೈಸೂರು ಚಳುವಳಿಯಲ್ಲಿ ಒಂದು ತಿಂಗಳು ಸಾದಾ ಶಿಕ್ಷೆಯನ್ನು ಅನುಭವಿಸಿದವರು. ಕೆ.ಹಾಲಪ್ಪ, ಸಿ.ಆರ್.ರುದ್ರಯ್ಯ, ಜೆ.ವೀರಪ್ಪ, ದುಮ್ಮಿರಾಜಪ್ಪ, ಡಾ. ಸಿ.ಹನುಮಂತಪ್ಪ, ಡಿ.ಎಸ್.ರಾಮಯ್ಯ, ಎನ್.ಬಿ. ವೆಂಕಟರಮಣಶೆಟ್ಟರು, ಡಿ.ಎಸ್. ರಾಮಯ್ಯ, ಹೆಚ್.ಕೆಂಚಪ್ಪ, ಬಿ.ಸಿದ್ದಪ್ಪ, ಎನ್.ಆರ್.ಗಿರಿಮಾಜಿ, ಖಾದಿ ಶಂಕರಪ್ಪ, ಇವರೆಲ್ಲರೂ ೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರೆ, ಕೆ.ಕೇಶವ ಶೆಣೈ, ಎಂ.ಮುನಿಸ್ವಾಮಿ, ನಾರಾಯಣಪ್ಪ, ಕೆ.ಮುನಿರತ್ನ ಮೊದಲಿಯಾರ್ ಎಂ.ವೈ.ರಾಘವೇಂದ್ರರಾವ್ ಮೊದಲಾದವರು ೪೭ರ ಮೈಸೂರು ಚಳುವಳಿಯಲ್ಲಿ ಭಾಗವಹಿಸಿ ಶಿಕ್ಷೆ ಅನುಭವಿಸಿದವರಾಗಿದ್ದಾರೆ. ಗಿರಿಮಾಜಿ, ಕೆ.ಶಿವಶಂಕರ, ಕೆ.ವಿ.ಜೋಯಿಸ್, ಎಸ್.ಸಿ.ಬಸಪ್ಪ, ಹೆಚ್.ರೇವಣಪ್ಪನವರು ೩೮ರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಶಿಕ್ಷೆ ಅನುಭವಿಸಿದವರು. ಜಿ.ಎಂ.ಗುರಪ್ಪ, ಜಿ.ಎಂ.ಚನ್ನಬಸಪ್ಪ, ಎ.ಎಂ.ಚನ್ನಯ್ಯ, ಪತ್ನಿ ಎ.ಎಂ.ಸಿ.ನಾಗರತ್ನಮ್ಮ, ಸಂ.ಗಣೇಶ, ಜಿ.ಎಂ.ಚನ್ನಪ್ಪ, ಎಸ್.ನೆಮಾಜಿರಾವ್, ಎಸ್.ಎಂ.ಗಣೇಶ, ಶ್ಯಾಮರಾವ್, ಹೆಚ್.ಎಂ.ಓಂಕಾರಪ್ಪ, ಜಿ.ಕೆ.ಶ್ಯಾಮರಾವ್, ಡಿ.ರವಳಪ್ಪ, ಎಸ್.ಕೆ.ಪಾಪಯ್ಯರಾಜು, ಟಿ.ಜಿ. ಜನಾರ್ದನರಾವ್, ಟಿ.ಜಿ.ತುಳುಜಪ್ಪ, ಕೆ.ಹೆಚ್.ವಿರೂಪಾಕ್ಷಪ್ಪ, ಹೆಚ್.ಈ.ಕೃಷ್ಣಪ್ಪ, ಕೆ.ಹಸನ್‌ಬ್ಯಾರಿ, ಹೆಚ್.ಎಂ. ಮಲ್ಲಿಕಾರ್ಜುನಪ್ಪ, ಕೆ.ಕೃಷ್ಣಮೂರ್ತಿ, ವಾಸಪ್ಪಗೋಗಿ, ಹೆಚ್.ಎಸ್.ಮಂಜುನಾಥ್

ಉಪಾಧ್ಯ, ಟಿ.ಡಿ.ಶಂಕರನಾರಾಯಣರಾವ್, ಎಸ್.ಎಲ್.ಶ್ರೀರಂಗರಾಜು, ಭೂಪಾಳಂ ಆರ್.ಕೃಷ್ಣಮೂರ್ತಿ, ವಿ.ವೆಂಕಟಪ್ಪ, ಎ.ವಿ.ಶ್ರೀನಿವಾಸ್, ಈಶ್ವರಪ್ಪ, ಕಾಳೋಜಿ ರಾವ್, ಎನ್.ಕೆ.ಸೀತಾರಾಮಯ್ಯಂಗಾರ್, ಬಿ.ವಿ.ಮಾಧವರಾವ್, ಎಸ್.ರಾಮಚಂದ್ರ, ಡಿ.ಹೆಚ್.ನಾಗರಾಜಶೆಟ್ಟಿ, ಎಸ್.ಡಿ.ತೋಟಪ್ಪ, ಯು.ಸಿ.ಗಂಗಾಧರಪ್ಪ, ಎಂ.ರಾಮರಾವ್ ಪವಾರ್, ವೈ.ಎಸ್.ಬಾಲಸುಬ್ರಹ್ಮಣ್ಯಂ, ಹೋ.ಮಾಧವರಾವ್, ಬಿ.ವಿ.ರಾಮರಾವ್, ಶ್ರೀಮತಿ ಹೆಚ್.ಪದ್ಮಾವತಿಬಾಯಿ, ಟಿ.ಗುಂಡೂರಾವ್, ಕೆರೋಡಿ ಕೃಷ್ಣಮೂರ್ತಿ, ಭೂಪಾಳಂ ಚಂದ್ರಶೇಖರಯ್ಯ, ಬಿ.ಆರ್.ಪುಟ್ಟನಂಜಪ್ಪ, ಬಿ.ದೊರೆಸ್ವಾಮಿ ಅಯ್ಯಂಗಾರ್, ಕೆ.ಆರ್.ಮಾಧವರಾವ್, ಶ್ರೀಮತಿ ರತ್ನಮ್ಮ ಮಾಧವರಾವ್, ಎಸ್.ಎನ್. ಈಶ್ವರಪ್ಪ, ಚನ್ನಗಿರಿ ಸೋಮಣ್ಣ ಶೆಟ್ಟರು, ಕಮಲಶಿಲೆ ಸುಬ್ಬರಾವ್, ಬಿಳಿಗಿನಿಂಗಪ್ಪ, ಮಡಿವಾಳರ ಬೈರಪ್ಪ ಗುಳ್ಳಪ್ಪ, ಕರಿಸಿದ್ಧಪ್ಪ, ಶ್ರೀಮತಿ ಟಿ.ಎಸ್.ಪೊನ್ನಮ್ಮಾಳ್, ಶ್ರೀಮತಿ ರಂಗೂಬಾಯಿ, ಎನ್.ಜಿ.ರುದ್ರಪ್ಪ, ಹೆಚ್.ಸಿ.ಸತ್ಯನಾರಾಯಣರಾವ್, ಎಸ್.ಎನ್.ಶಾಮಣ್ಣ ಕೆ.ಜೆ. ವೇದವ್ಯಾಸಾಚಾರ್, ಎಸ್.ಚಂದ್ರಶೇಖರಶಾಸ್ತ್ರಿ, ಕೆ.ಟಿ.ಶಾಮಯ್ಯಗೌಡರು, ಎಸ್.ವಿ.ಕೃಷ್ಣಮೂರ್ತಿರಾವ್, ಹೆಚ್.ಎನ್.ನರಹರಿ ಜೋಯಿಸ್, ಹೆಚ್.ಗಂಗಾಧರಯ್ಯ, ಎಂ.ಡಿ.ಶ್ಯಾಮರಾಯಾಚಾರ್, ಟಿ.ವಿ.ಶ್ರೀನಿವಾಸರಾವ್, ಹೆಚ್.ಎಸ್.ರುದ್ರಪ್ಪ, ಎ.ಆರ್. ಬದರೀನಾರಾಯಣ್, ಸಿ.ರಾಮಸ್ವಾಮಿಶೆಟ್ಟರು, ಹೆಚ್.ಸಿದ್ದಯ್ಯ, ಶ್ರೀನಿವಾಸಯ್ಯಂಗಾರ್, ಕೆ.ಎನ್.ಮೂರ್ತಿ, ಕೆ.ಶ್ರೀನಿವಾಸಮೂರ್ತಿ, ಎಂ.ಸಿ.ಮಹೇಶ್ವರಪ್ಪ, ಹೆಚ್.ಎಸ್.ನಾರಾಯಣಭಟ್, ಯು.ಪಿ.ಶಂಕರರಾವ್, ವಿ.ವಿಠೋಬರಾವ್, ಡಾ. ಹೆಚ್.ಕೆ.ಚಂದ್ರಪ್ಪಗೌಡ, ಹೆಚ್.ವಿ. ನಂದ್ಯಪ್ಪ, ಎಸ್. ರಾಜಾರಾಂ ಕುಂಟೆ, ಸಿ.ಸಿದ್ಧಪ್ಪ, ಹೆಚ್.ಹರಿದಾಸ್ ಕಾಮತ್, ಬಿ.ಎಂ. ಈಶ್ವರಯ್ಯ, ಪಿ.ಮುರುಡಪ್ಪ, ರುದ್ರಪ್ಪ, ಎಸ್. ಸಿದ್ಧಮಲ್ಲಪ್ಪ, ಬಿ.ಸಿ.ರಾಮಪ್ಪ, ಹೆಚ್. ರಾಮಣ್ಣ, ಎನ್.ವಿ. ರಾಮಚಂದ್ರ ಮೂರ್ತಿ, ಎಸ್.ಜಿ. ಬಾಲಚಂದ್ರಪ್ಪ, ಶ್ರೀಮತಿ ಟಿ.ಎಸ್. ವಿಶಾಲಾಕ್ಷಿ, ಶಾಂತಪ್ಪಗೋಗಿ, ಗುಜರ್ ಲಕ್ಷ್ಮಣರಾವ್, ಎನ್. ವಿಠೋಬರಾವ್, ಶ್ರೀಮತಿ ಚಂದ್ರಿಕಾ ಗುತ್ತಲ್, ಆರ್.ಸೂರಪ್ಪ, ಹೆಚ್.ತಿಮ್ಮಯ್ಯ, ಹೆಚ್.ಎಂ. ಜಯದೇವಯ್ಯ, ಕೆ.ಎಸ್.ರಾಮಚಂದ್ರ ಶೆಟ್ಟಿ, ಗುರುಲಿಂಗಪ್ಪ ಜವುಳಿ, ಸಿ.ಎಸ್.ಸತ್ಯನಾರಾಯಣಶೆಟ್ಟಿ, ಎಸ್.ಆರ್. ಕೃಷ್ಣಮೂರ್ತಿ, ಹೆಚ್.ಎಸ್. ರಾಮಯ್ಯ, ಅಮೀರ್ ಜಾನ್, ಕೆ.ವಿ. ದೇವಪ್ಪಗೌಡರು, ಟಿ.ಕೆ. ಸತ್ಯನಾರಾಯಣಶೆಟ್ಟಿ, ಟಿ.ನಾಗರಾಜಶೆಟ್ಟಿ, ಎಸ್.ಜಿ. ಹಾಲಪ್ಪ, ಎಂ.ಸಿ. ಈಶ್ವರರಾವ್ ಪವಾರ್,



ಹೆಚ್.ಎನ್. ಶ್ರೀಧರರಾಜು, ಡಿ.ಹೆಚ್. ಸತ್ಯನಾರಾಯಣಶೆಟ್ಟಿ, ಹೆಚ್.ಎನ್. ಸೀತಾರಾಮು, ನವಲೆ ರಾಚಪ್ಪ, ಎಸ್.ವಿ. ಕೃಷ್ಣಭಟ್ಟ, ಎನ್.ಈ. ವಿಜಯೇಂದ್ರಾಚಾರ್, ಎಸ್.ಎಂ. ಶಾಂತವೀರಪ್ಪ, ಆರ್.ಎಸ್. ಗೋವಿಂದಶೆಟ್ಟಿ, ಹೆಚ್.ಎಂ. ಈಶ್ವರಾರಾಧ್ಯ, ಟಿ.ಎಸ್. ಸಿದ್ಧಪ್ಪ, ಆರ್. ಆನೆಪ್ಪ, ಸಜ್ಜನರ ಮಂಜಪ್ಪ, ಮಂಡಪ್ಪ, ಎಸ್.ನಾರಾಯಣರಾವ್, ಹೆಚ್.ರಾಮಕೃಷ್ಣರಾವ್, ಟಿ.ಸಿ.ಎಸ್.ಮಣಿಯಂರವರು, ಜಿ.ಸದಾಶಿವರಾವ್, ವೈ.ಪಾರ್ಥನಾರಾಯಣ ಪಂಡಿತರು ಈ ಮೊದಲಾದವರು ಶಿವಮೊಗ್ಗ ನಗರದಿಂದಲೂ, ಬಿ.ಹನುಮಂತಪ್ಪ, ಹೆಚ್.ವಿ.ಹಾಲಪ್ಪ ಜವಳಿ, ಎನ್.ಎಸ್.ಚನ್ನಪ್ಪ, ಮಂಜಪ್ಪ, ನಿಂಗಮ್ಮ, ಜವಳಿ ವೀರಪ್ಪ, ಎಂ.ಸದಾಶಿವಯ್ಯ, ದುಮ್ಮಿ ಜಯಪ್ಪ, ದೊಡ್ಡ ತಮ್ಮಪ್ಪ, ಡಿ.ಜಿ.ಪಂಚಾಕ್ಷರಪ್ಪ, ಶಂಕರಪ್ಪ, ವೆಂಕಟಪ್ಪ, ಜಿ.ಎಸ್.ಶೇಖರಪ್ಪ, ಹತ್ತಿ ನಾಗಪ್ಪ, ಮಲ್ಲಪ್ಪ, ಹೆಚ್.ವಿ.ನಾಗಪ್ಪಶೆಟ್ಟರು, ಎ.ಬಸವಣ್ಯಪ್ಪ, ಹೆಚ್.ಮಲ್ಲಪ್ಪ, ಕೆ.ಪಿ.ತಿಪ್ಪಯ್ಯರಾಜು, ಬಿ.ಲಕ್ಷ್ಮಣರಾವ್, ಹೆಚ್.ಪಿ.ವೀರಪ್ಪ, ಎನ್.ಜಿ.ಪರಮೇಶ್ವರಪ್ಪ, ಬಿ.ಹೆಚ್.ರುದ್ರಪ್ಪ, ಬಸಪ್ಪ, ರಾಮಚಂದ್ರಾಚಾರ್, ಹೆಚ್.ಎಸ್.ಪರಮಶಿವಪ್ಪ, ಹೆಚ್.ಇ.ಚನ್ನಪ್ಪ ಈ ಮೊದಲಾದವರು ಶಿವಮೊಗ್ಗ ಗ್ರಾಮಾಂತರ ಪ್ರದೇಶದಿಂದಲೂ ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮನ್ನು ತೊಡಗಿಸಿಕೊಂಡವರಾಗಿದ್ದು, ಹೆಚ್ಚಿನವರೆಲ್ಲರೂ ೧೯೩೮ರಲ್ಲಿ ನಡೆದ ಅರಣ್ಯ ಸತ್ಯಾಗ್ರಹ, ೧೯೪೨ರ ಕ್ವಿಟ್ ಇಂಡಿಯ ಚಳುವಳಿ, ೧೯೪೭ರ ಮೈಸೂರು ಸತ್ಯಾಗ್ರಹ ಇವುಗಳಲ್ಲಿ ಪಾಲ್ಗೊಂಡು ಸ್ವಾತಂತ್ರ್ಯಕ್ಕಾಗಿ ಶಿಕ್ಷೆಯನ್ನು ಅನುಭವಿಸಿದವರಾಗಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಗೆ ಜನತೆಯನ್ನು ಹುರಿದುಂಬಿಸಲು, ಸತ್ಯಾಗ್ರಹದಲ್ಲಿ ಜನರನ್ನು ಸೇರಿಸಲು ಜಿಲ್ಲಾದ್ಯಂತ ಸಾಕಷ್ಟು ಮಹನೀಯರು ದುಡಿದಿದ್ದಾರೆ. ಅವರಲ್ಲಿ ಕೆಲವರನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ನಾಗಪ್ಪಶೆಟ್ಟರು, ರಾಜಗೋಪಾಲ್, ಕಾಳೋಜಿರಾವ್ ಮತ್ತು ಡಿ.ಎಸ್.ದಿನಕರ್ ಮತ್ತು ಇತರರು ಪಾಲ್ಗೊಂಡಿದ್ದರು. ಆ ಸಂದರ್ಭದಲ್ಲಿ ೧೯೪೨ರ ಚಳುವಳಿಯಲ್ಲಿ ಭಾಗವಹಿಸಿ ಹದಿನೈದು ತಿಂಗಳು ಸ್ಥಾನಬದ್ಧತೆಯಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಹಲವರನ್ನು ಬಂಧಿಸಲಾಗಿತ್ತು. ಆ ಸಂದರ್ಭದಲ್ಲಿ ಅಲ್ಲಿಗೆ ಸತ್ಯಾಗ್ರಹಿಗಳ ಮೇಲೆ ಗುಂಡು ಹಾಡಿಸಲು ಅಧಿಕಾರಿಗಳು ಕೊಟ್ಟ ಆಜ್ಞೆಯನ್ನು ನಿರಾಕರಿಸಿ ಬ್ರಿಟಿಷ್ ಕಮ್ಯಾಂಡರುಗಳ ಮೇಲೆ ದಂಗೆ ಎದ್ದ ಅಪರಾಧ ಹೊತ್ತಿದ್ದ ಹನ್ನೊಂದು ಜನ ಸೈನಿಕರನ್ನು ಹಿರಿಯ ಸೇನಾಧಿಕಾರಿಗಳು

ಕಲ್ಕತ್ತೆಯಿಂದ ಸೆಂಟ್ರಲ್ ಜೈಲಿನಿಂದ ಮರಣದಂಡನೆ ವಿಧಿಸಲು ಕರೆದುಕೊಂಡು ಬಂದಿದ್ದರು. ಅಲ್ಲಿ ಅವರಿಗೆ ಚಿತ್ರಹಿಂಸೆ ಕೊಡಲಾಗುತ್ತಿತ್ತು. ಅವರಿಗೆ ಆಗಿದ್ದ ಗಲ್ಲುಶಿಕ್ಷೆಯ ವಿಷಯ ಅವರ ಸಂಬಂಧಿಕರಿಗೆ ತಿಳಿದಿರಲಿಲ್ಲ. ಶಿವಮೊಗ್ಗದ ಇವರುಗಳು ಸಮಾಲೋಚನೆ ನಡೆಸಿ ಆ ಸಂದರ್ಭದಲ್ಲಿ ಮಲ ಹೊತ್ತು ತರುವ ಜೈಲು ನೌಕರನೊಬ್ಬನ ವಿಶ್ವಾಸ ಪಡೆದು ಸೈನಿಕರ ಮನೆಗಳ ವಿಳಾಸ ಪಡೆದುಕೊಂಡಿದ್ದರು. ಅವರು ವಿಳಾಸವನ್ನು ತಮ್ಮ ರಕ್ತದಲ್ಲಿ ಬರೆದು ತಂದುಕೊಟ್ಟಿದ್ದಲ್ಲದೆ, ಈ ಕೆಲಸಕ್ಕೆ ಸಂಭಾವನೆ ಕೊಡಲು ಹೋದರೆ ಅವರು ಅದನ್ನು ನಮ್ರತೆಯಿಂದ ನಿರಾಕರಿಸಿ ಇದು ತಮ್ಮ ಅಲ್ಪ ಸೇವೆ ಎಂದು ಹೇಳಿದ್ದು ಅವರ ಸ್ವಾತಂತ್ರ್ಯದ ಕುರಿತಾಗಿದ್ದ ಹೆಬ್ಬಯಕೆಯನ್ನು ತಿಳಿಸುತ್ತದೆ. ತಂತಿ ಮೂಲಕ ಮನೆಯವರಿಗೆ ಮರಣದಂಡನೆಯ ವಿಷಯ ತಿಳಿಸಲಾಯಿತು. ಅಂದಿನ ಕರಾಳ ದಿನದ ಬೆಳಗಿನ ಜಾವ ಬೆಂಗಳೂರು ಸೆಂಟ್ರಲ್ ಜೈಲಿಯಲ್ಲಿ ಅವರಿಗೆ ನೇಣುಗಂಬಕ್ಕೆ ಹಾಕುವ ಸಿದ್ಧತೆ ನಡೆದಿತ್ತು. ಸುತ್ತಲೂ ಮಿಲಿಟರಿ ಕಾವಲಿತ್ತು. ಕೊನೆಯಲ್ಲಿ ಅವರೆಲ್ಲರೂ ಏಕಕಂಠದಿಂದ "ಲಿಕೋ ಹಮಾರ ರಕ್ತಸೇ ಜಬತಕ್ ಚಲಾಯೇಂಗೆ ಗೋಲಿ" ಎಂಬ ಗೀತೆಯನ್ನು ಹಾಡುವುದರೊಂದಿಗೆ ಮಹಾತ್ಮ ಗಾಂಧೀ ಕಿ ಜೈ ಮತ್ತು ಭಾರತಮಾತಾ ಕಿ ಜೈ ಎಂದು ಜೈಕಾರ ಹಾಕಲಾಯಿತು. ಅನಂತರ ಅವರನ್ನು ಹೆಡೆಮುರಿ ಕಟ್ಟಿ ಸೆಂಟ್ರಲ್ ಜೈಲಿನಿಂದ ವೈಟ್‌ಫೀಲ್ಡ್‌ವರೆಗೆ ಕರೆದುಕೊಂಡು ಹೋಗಿ ಅಲ್ಲಿ ಗುಂಡಿಕ್ಕಿ ಕೊಲ್ಲಲಾಯಿತು. ಈ ಘಟನೆಯಿಂದ ನೊಂದ ಶಿವಮೊಗ್ಗದ ಹೋರಾಟಗಾರರು ಮತ್ತು ಕ್ರಿಮಿನಲ್ ಖೈದಿಗಳು ಉಪವಾಸ ಮಾಡಿದರು. ೧೯೪೭ರಲ್ಲಿ ಜವಾಬ್ದಾರಿ ಸರ್ಕಾರದ ಚಳುವಳಿ ಆರಂಭವಾಯಿತು. ನಾಗಪ್ಪಶೆಟ್ಟಿ, ಕಳೋಜಿರಾವ್ ಜಾದವ್, ಕೆ.ಶಿವಶಂಕರ್, ದಿನಕರ್, ನಾಗರಾಜ್ ಮೊದಲಾದವರಿಗೆ ಪೊಲೀಸರು ಬಂಧಿಸುವ ಸುಳಿವು ತಿಳಿದು ಭೂಗತರಾದರು. ಒಂದು ರಾತ್ರಿ ಎಲ್ಲರೂ ಮಾರುತಿ ರೈಸ್ ಮಿಲ್ ಹಿಂಭಾಗದಲ್ಲಿ ಸೇರಿ ಸತ್ಯಾಗ್ರಹವನ್ನು ಮುಂದುವರಿಸುವ ಕುರಿತು ಗುಪ್ತ ಸಭೆ ನಡೆಸುತ್ತಿದ್ದಾಗ ಆ ಪ್ರದೇಶವನ್ನು ಪೋಲೀಸರು ಸುತ್ತುವರೆದರು. ಪೋಲೀಸರಿಗೆ ಯಾರೂ ಸಿಗದಂತೆ ಪ್ರಯತ್ನ ಮಾಡಿ ಜಯಶಾಲಿಯಾದರು. ಕೊನೆಗೂ ೪೭ರ ಚಳುವಳಿಯಲ್ಲಿ ಪೋಲಿಸರಿಗೆ ಯಾರೂ ಅತಿಥಿಯಾಗಲಿಲ್ಲ. ಹೋರಾಟ ಮುಗಿದು ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಯುವಕರಲ್ಲಿ ರಾಷ್ಟ್ರಪ್ರಜ್ಞೆ ಮೂಡಿಸುವ ಸಲುವಾಗಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯನ್ನು ನಾಗಪ್ಪಶೆಟ್ಟರು, ಎಸ್.ವಿ.ಕೃಷ್ಣಮೂರ್ತಿರಾಯರು, ಹೆಚ್.ಎಸ್.ರುದ್ರಪ್ಪನವರು, ಕಡಿದಾಳ್ ಮಂಜಪ್ಪನವರು, ದಿನಕರ್ ಮೊದಲಾದವರು ಸೇರಿ ಪ್ರಯತ್ನ ನಡೆಸಿ ಅದರಲ್ಲಿ ಯಶಸ್ವಿಯೂ ಆದರು.



ಜಿಲ್ಲೆಯಿಂದ ಬಂಧಿತರಾದ ಹಲವು ಸತ್ಯಾಗ್ರಹಿಗಳನ್ನು ಬೆಂಗಳೂರಿನ ಜೈಲಿಗೆ ಕಳುಹಿಸಿಕೊಡಲಾಗಿತ್ತು. ೧೯೪೩ರ ಜನವರಿ ೨೬ರಂದು ಸತ್ಯಾಗ್ರಹಿಗಳೆಲ್ಲಾ ಪೂರ್ಣ ಸ್ವರಾಜ್ ದಿನಾಚರಣೆ ಪ್ರಯುಕ್ತ ತ್ರಿವರ್ಣಧ್ವಜ ಹಾರಿಸಲು ತೀರ್ಮಾನಿಸಿದರು. ಡಾ. ಪಾರ್ಥನಾರಾಯಣ ಪಂಡಿತ ಎಂಬುವವರಿಗೆ ಧ್ವಜಾರೋಹಣ ಮಾಡಲು ಕೋರಲಾಯಿತು. ಧ್ವಜಾರೋಹಣ ಸಂದರ್ಭದಲ್ಲಿ ಜೈಲು ಸಿಬ್ಬಂದಿ ಅದನ್ನು ತಡೆದು ಧ್ವಜ ಇಳಿಸಲು ಬಂದಾಗ ಪಂಡಿತರು ಧ್ವಜದ ಹಗ್ಗವನ್ನು ಕೈಬಿಡಲಿಲ್ಲ. ಸಿಬ್ಬಂದಿ ಅವರನ್ನು ಲಾಠಿಯಿಂದ ತೀವ್ರವಾಗಿ ಥಳಿಸಿದರು. ಈ ವೇಳೆಗೆ ಎಸ್.ವಿ.ಕೃಷ್ಣಮೂರ್ತಿ ಎಂಬ ಮತ್ತೋರ್ವ ಸತ್ಯಾಗ್ರಹಿ ಪಂಡಿತರ ರಕ್ಷಣೆಗೆ ಧಾವಿಸಿ ಅವರೂ ಪೆಟ್ಟು ತಿಂದರು. ಅಲ್ಲಿದ್ದ ಸತ್ಯಾಗ್ರಹಿಗಳಿಗೆಲ್ಲಾ ಪೆಟ್ಟಿನ ಸಿಹಿ ಹಂಚಲಾಯಿತು. 'ರಕ್ತ ಹರಿದರೂ ಧ್ವಜದ ಹಗ್ಗಬಿಡೆ' ಎಂದು ಹೇಳುವ ಮೂಲಕ ಪಂಡಿತರು ಮತ್ತು ಕೃಷ್ಣಮೂರ್ತಿಯವರು ಎಲ್ಲರ ಅಭಿಮಾನಕ್ಕೆ ಪಾತ್ರರಾದರು.

ಕರ್ನಾಟಕದಲ್ಲಿರುವ ದೇಶೀ ಸಂಸ್ಥಾನಗಳೆಲ್ಲ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿದ್ದವು. ಮೈಸೂರು ಸಂಸ್ಥಾನ, ಹೈದರಾಬಾದ್ ಬಿಟ್ಟರೆ ಉಳಿದುವೆಲ್ಲ ಚಿಕ್ಕ ಚಿಕ್ಕ ಸಂಸ್ಥಾನಗಳು. ಹೀಗಿರುವುದರಿಂದ ಆಡಳಿತಗಳಲ್ಲಿ ಭಿನ್ನತೆ ಇದ್ದರೂ ಜನಸಾಮಾನ್ಯರ ವಿಚಾರಗಳು, ಭಾವನೆಗಳು, ಆಶೋತ್ತರಗಳು ಕರ್ನಾಟಕದ ಎಲ್ಲ ಭಾಗಗಳಲ್ಲಿ ಹೆಚ್ಚು ಕಡಿಮೆ ಒಂದೇ ಆಗಿದ್ದವು. ಇಡೀ ಭಾರತದಲ್ಲಿ ಬೀಸಿದ ಸ್ವಾತಂತ್ರ್ಯ ಪ್ರೇಮದ ಗಾಳಿ ಎಲ್ಲ ಸಂಸ್ಥಾನೀ ಪ್ರಜೆಗಳ ಮನೋಮಂಡಲದಲ್ಲಿ ಕೂಡಲೇ ತುಂಬಿಕೊಂಡಿತು. ಸಂಸ್ಥಾನಗಳ ಅರಸರು, ಆಡಳಿತಗಾರರು ಎಷ್ಟೇ ಬಿಗಿಯಾಗಿ ತಮ್ಮ ಪ್ರಜೆಗಳನ್ನು ಹತ್ತಿಕ್ಕಲು ಪ್ರಯತ್ನಿಸಿದರೂ ಅದು ಸಾಧ್ಯವಾಗುವದು ಶಕ್ಯವಿರಲಿಲ್ಲ. ದೇಶೀಯ ಸಂಸ್ಥಾನದ ಅರಸರು ಭಾರತೀಯರೇ ಆದರೂ ಅವರ ನಿರಂಕುಶ ಆಳ್ವಿಕೆ ಪ್ರಜೆಗಳಿಗೆ ಅತ್ಯಂತ ದಾರುಣವೇ ಆಗಿತ್ತು. ಆದುದರಿಂದ ಸ್ವಾತಂತ್ರ್ಯಕ್ಕಾಗಿ ತಾವೂ ಹೋರಾಡಬೇಕೆಂಬ ಸಾತ್ವಿಕ ಆವೇಶ ಸಂಸ್ಥಾನೀ ಪ್ರಜೆಗಳಲ್ಲೂ ವಾಯುವೇಗದಿಂದ ಹೆಚ್ಚಿತು. ೧೯೩೯ರಲ್ಲಿ ಎರಡನೆಯ ಮಹಾಯುದ್ಧ ಆರಂಭವಾದಾಗ ಬ್ರಿಟಿಷ್

ಪ್ರಾಂತ್ಯಗಳಲ್ಲಿನ ಕಾಂಗ್ರೆಸ್ ಸರ್ಕಾರಗಳು ರಾಜೀನಾಮೆ ನೀಡಿದ್ದರ ಹಿಂದೆಯೇ ಯುದ್ಧ ವಿರೋಧಿ, ವೈಯಕ್ತಿಕ ಸತ್ಯಾಗ್ರಹಕ್ಕೆ ಗಾಂಧೀಜಿ ಕರೆ ನೀಡಲು ಕರ್ನಾಟಕದ ಜಿಲ್ಲೆಗಳಲ್ಲಿ ನೂರಾರು ಸತ್ಯಾಗ್ರಹಿಗಳು ೧೯೪೦–೪೧ರಲ್ಲಿ ವೈಯಕ್ತಿಕ ಸತ್ಯಾಗ್ರಹ ನಡೆಸಿ ಜೈಲು ಕಂಡರು. ಇದರ ಹಿಂದೆಯೇ ಹೋರಾಡಿದ ಅಂತಿಮ ಘಟ್ಟವಾದ ಭಾರತ ಬಿಟ್ಟು ತೊಲಗಿ ಚಳವಳಿಯನ್ನು ೧೯೪೨ರ ಆಗಸ್ಟ್‌ನಲ್ಲಿ ಹೂಡಿದಾಗ ಸಂಸ್ಥಾನದಲ್ಲಿ ಎಲ್ಲ ಕಡೆ ಸಮಾನವಾಗಿ ಈ ಚಳವಳಿ ಸಾಗಿತು. ವಿದ್ಯಾರ್ಥಿಗಳೂ ಕಾರ್ಮಿಕರೂ ಬೃಹತ್ ಪ್ರಮಾಣದಲ್ಲಿ ಚಳವಳಿಯಲ್ಲಿ ಪಾಲುಗೊಂಡರಲ್ಲದೆ ಸರ್ಕಾರವನ್ನೇ ಸ್ಥಗಿತಗೊಳಿಸಬೇಕೆಂಬ ಉದ್ದೇಶದಿಂದ ಎಲ್ಲೆಡೆ ಬುಡಮೇಲು ಹಾಗೂ ವಿಧ್ವಂಸಕ ಕೃತ್ಯಗಳೂ ನಡೆದವು. ಚನ್ನಬಸಪ್ಪ ಅಂಬಲಿ ಅವರು ಅಧ್ಯಕ್ಷರಾಗಿದ್ದ ಒಂದು ಕ್ರಿಯಾಸಮಿತಿ ಮುಂಬಯಿ ಕ್ಷೇತ್ರದಿಂದ ಚಳವಳಿಗೆ ಮಾರ್ಗದರ್ಶನ ಮತ್ತು ನೆರವು ನೀಡುತ್ತಿತ್ತು. ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲೂ, ಮೈಸೂರು, ಬೆಂಗಳೂರು ನಗರಗಳಲ್ಲೂ ಈ ಚಳವಳಿ ಉಗ್ರ ರೂಪ ತಾಳಿತು. ಬೆಂಗಳೂರು, ಭದ್ರಾವತಿ, ಕೆ.ಜಿ.ಎಫ್, ದಾವಣಗೆರೆಗಳಲ್ಲಿ ಮೂವತ್ತಮೂರು ಸಾವಿರ ಕಾರ್ಮಿಕರು ಮೂರು ವಾರ ಸತತ ಸತ್ಯಾಗ್ರಹ ಹೂಡಿದರು. ದೂರವಾಣಿ ತಂತಿ ಕತ್ತರಿಸುವುದು, ರೈಲುಕಂಬಿ ಕೀಳುವುದು ಎಲ್ಲೆಡೆ ಸಾಗಿತು. ಇದರಿಂದ ಬೆಂಗಳೂರು ಗುಂತಕಲ್ಲು ನಡುವೆ ಎರಡು ವಾರ ರೈಲು ಓಡಾಟ ನಿಂತಿತು. ಕರ್ನಾಟಕದಲ್ಲಿ ೨೬ ರೈಲು ನಿಲ್ದಾಣಗಳು ಹಾನಿಗೊಳಗಾದವು. ಬ್ರಿಟಿಷರ ವಿರುದ್ಧ ವಿಧ್ವಂಸಕ ಕೃತ್ಯ ನಡೆಸಲು ನೂರಾರು ಸ್ವಾತಂತ್ರ್ಯಯೋಧರು ಭೂಗತರಾಗಿ ಜೀವದ ಹಂಗುತೊರೆದು ಕೆಲಸ ಮಾಡಿದರು. ಬೆಂಗಳೂರು, ನಿಪ್ಪಾಣಿಗಳಲ್ಲಿ ಅಂಚೆ ಕಛೇರಿಗಳನ್ನು ಸುಟ್ಟರು. ಇದರಂತೆ ಗ್ರಾಮ ಚಾವಡಿ ಮುಂತಾದ ಸರ್ಕಾರೀ ಕೇಂದ್ರಗಳೂ ಹಾನಿಗೊಳಗಾದವು. ಆಗಸ್ಟ್ ತಿಂಗಳಲ್ಲಿ ಗಾಂಧೀಜಿಯವರ ಬಂಧನ ಮತ್ತು ಮಹಾದೇವ ದೇಸಾಯಿಯವರ ಮರಣಗಳ ಬಗ್ಗೆ ಬೆಂಗಳೂರಿನಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಗಳ ಮೇಲೆ ಗೋಲೀಬಾರಾಗಿ ಅನೇಕ ಜನ ಸತ್ತರು. ಇದೇ ರೀತಿ ದಾವಣಗೆರೆಯಲ್ಲಿ ೫, ಬೈಲಹೊಂಗಲದಲ್ಲಿ ೭, ತಿಪಟೂರು, ನಿಪ್ಪಾಣಿ, ಹುಬ್ಬಳ್ಳಿ, ಕಡಿವೆ, ಶವಾಪುರಗಳಲ್ಲಿ ಒಂದೊಂದು ಮರಣಗಳಾದವು. ಕೊಲ್ಲಾಪುರ ಸಂಸ್ಥಾನದ ಗಾರಗೋಟಿ ಎಂಬಲ್ಲಿ ಕಂದಾಯದ ಹಣ ಲೂಟಿ ಮಾಡಲು ಯತ್ನಿಸಿ ನಿಪ್ಪಾಣಿಯ ಏಳು ಸ್ವಾತಂತ್ರ್ಯ ಯೋಧರು ಅಸುನೀಗಿದರು. ಹಾವೇರಿ ತಾಲ್ಲೂಕು ಹೊಸ ರೀತಿಯಲ್ಲಿ



೧೯೪೩ರ ಏಪ್ರಿಲ್ ಒಂದರಂದು ಹಫ್ತ ಲೂಟಿ ಮಾಡುವ ಯತ್ನದಲ್ಲಿ ಸ್ವಾತಂತ್ರ್ಯಯೋಧರಾದ ಮೈಲಾರ ಮಹಾದೇವಪ್ಪ, ಮಡಿವಾಳರ ತಿರುಕಪ್ಪ, ಹಿರೇಮಠದ ವೀರಯ್ಯನವರು ಪೊಲೀಸರ ಗುಂಡಿಗೆ ಬಲಿಯಾದರು. ಹಾಸನ ಜಿಲ್ಲೆಯಲ್ಲಿ ಸಂತೆಸುಂಕದ ವಿರುದ್ಧ ವ್ಯಾಪಕ ಧರಣಿ ನಡೆದಿರಲು ಶ್ರವಣಬೆಳಗೊಳದಲ್ಲಿ ಪೊಲೀಸ್ ಪೇದೆ ಅಸುನೀಗಿದ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರಲ್ಲಿ ಕಂದಾಯ ವಸೂಲಿ ವಿರುದ್ಧ ಪ್ರತಿಭಟಿಸಿ ಗ್ರಾಮವನ್ನು ಸ್ವತಂತ್ರ ಹಳ್ಳಿ ಎಂಬುದಾಗಿ ಸಾರಿದರು.

## ಈಸೂರು ಘಟನೆ ೧೯೪೨

ಶಿಕಾರಿಪುರದ ಕುಸ್ಕೂರಿನ ಪ್ರಕರಣವೊಂದು ಗ್ರಾಮಸ್ಥರ ಮೇಲಿನ ಗಾಂಧಿ ವಿಚಾರಗಳ ಪ್ರಭಾವಕ್ಕೆ ಸಾಕ್ಷಿಯಾಗಿದೆ. ಕುಸ್ಕೂರಿನ ಪಟೇಲರಾದ ಬೂದ್ಯಪ್ಪಗೌಡ ಎಂಬುವವರು ಚಳವಳಿಯಿಂದ ಪ್ರೇರಿತರಾಗಿ ತಮ್ಮ ಪಟೇಲದಾರಿಕೆಗೆ ರಾಜೀನಾಮೆ ನೀಡಿದ್ದರು. ಅವರನ್ನು ಹೆದರಿಸಲು ಜಿಲ್ಲಾಧಿಕಾರಿಗಳೊಂದಿಗೆ ಬಂದಿದ್ದ ಪೊಲೀಸರು ಗೌಡರ ಮೇಲೆ ದೌರ್ಜನ್ಯ ಮಾಡಿದರು. ಇನ್‌ಸ್ಪೆಕ್ಟರ್ ದಾಸಪ್ಪ ಎಂಬಾತ ಗೌಡರನ್ನು ಚಾಟಿಯಿಂದ ಹೊಡೆದಾಗ ಗೌಡರು ಮೂರ್ಛೆ ಹೋದರು. ಈ ಘಟನೆಯಿಂದ ಗ್ರಾಮಸ್ಥರು ಕೋಪಗೊಂಡು ಅಧಿಕಾರಿಗಳಿಗೆ ಸೂಕ್ತ ಪಾಠ ಕಲಿಸಲು ಸಿದ್ಧರಾದರು. ಅದೇ ವೇಳೆಗೆ ಜ್ಞಾನ ಬಂದ ಗೌಡರು ಗ್ರಾಮಸ್ಥರನ್ನು ತಡೆದು ತಾವೇ ಸ್ವಯಂ ಬಂಧನಕ್ಕೆ ಒಳಗಾಗಿ ರಕ್ತಪಾತವನ್ನು ತಡೆದರು. ಈ ಬೂದ್ಯಪ್ಪಗೌಡರ ದೇಶಪ್ರೇಮ ಅಪಾರ. ತಮ್ಮ ಕೊನೆಗಾಲದ ಸಂದರ್ಭದಲ್ಲಿ ಕಾಲಿಗೆ ಪೆಟ್ಟು ಬಿದ್ದಿದ್ದರೂ ಗಾಡಿಯಲ್ಲಿ ಕುಳಿತು ಸ್ವಾತಂತ್ರ್ಯ ದಿನದ ಆಚರಣೆಗೆ ಹಾಜರಾಗುತ್ತಿದ್ದರಂತೆ. ಇಂತಹ ದೇಶಪ್ರೇಮಿಗಳನ್ನು ಹೊಂದಿದ್ದ ತಾಲ್ಲೂಕು ಶಿಕಾರಿಪುರ ಆಗಿದೆ.

ಈಸೂರಿನ ಬಂಡಾಯವನ್ನು ನೆನಪಿಸಿಕೊಳ್ಳದಿದ್ದಲ್ಲಿ ಜಿಲ್ಲೆಯ ಮಾತ್ರವಲ್ಲ, ರಾಜ್ಯದಲ್ಲಿ ನಡೆದ ಭಾರತ ಬಿಟ್ಟು ತೊಲಗಿ ಚಳುವಳಿಯ ವಿವರಣೆಯು ಅಪೂರ್ಣವಾಗುತ್ತದೆ. 'ಏಸೂರು ಕೊಟ್ಟರೂ ಈಸೂರು ಬಿಡೆವು' ಎಂಬ ಪ್ರಸಿದ್ಧ ಘೋಷಣೆಯೊಂದಿಗೆ ಈಸೂರ ಜನತೆ ಸ್ವಾತಂತ್ರ್ಯ ಹೋರಾಟಕ್ಕೆ ದನಿಗೂಡಿಸಿದ್ದು ಸ್ಮರಣೀಯ ಸಂಗತಿ. ಈ ಚಳುವಳಿಯ ಮೂಲಕ, ಈಸೂರು ಚರಿತ್ರೆಯ ಪುಟಗಳಲ್ಲಿ ದಾಖಲಾಗಿಬಿಟ್ಟಿದೆ. ಜನಸಾಮಾನ್ಯರೇ ನಾಯಕರಾದ

ಘಟನೆಯಿದಾಗಿದೆ. ಈಸೂರು ಅದರ ನೆರೆಯ ಗ್ರಾಮಗಳಿಗೆ ಚಳವಳಿ ಹೊಸತೇನಲ್ಲ. ೧೯೩೮ರಲ್ಲಿ ಗ್ರಾಮದಲ್ಲಿ ಅಖಿಲ ಮೈಸೂರು ರಾಜ್ಯ ರೈತ ಸಮ್ಮೇಳನ ನಡೆದಿತ್ತು. ಈಸೂರು ಕರ ನಿರಾಕರಣೆ ಪ್ರಭಾವಕ್ಕೆ ಒಳಗಾಗಿತ್ತು. ಅರಣ್ಯ ಚಳವಳಿಯ ಸಂದರ್ಭದಲ್ಲಿ ಈಸೂರಿನ ನಾಗೇಶಾಚಾರ್ಯ ಎಂಬುವವರು ಪಾಲ್ಗೊಂಡಿದ್ದರು. ೧೯೪೨ರ ಚಳುವಳಿ ಕೂಡಾ ಈಸೂರನ್ನು ತಲುಪಿದ್ದಿತು. ಗ್ರಾಮದಲ್ಲಿ ಪ್ರತಿದಿನ ಪ್ರಭಾತಫೇರಿ ಮತ್ತು ಸಭೆಗಳು ನಡೆಯುತ್ತಿದ್ದವು. ಆದರೆ ೧೯೪೨ರ ಸೆಪ್ಟೆಂಬರ್ ೨೮ರ ನಂತರ ಈಸೂರಿನಲ್ಲಿ ನಡೆದ ಘಟನೆಗಳು ಗ್ರಾಮವನ್ನು ಚರಿತ್ರಾರ್ಹಗೊಳಿಸಿದವು.

ಈಸೂರು ಕ್ರಾಂತಿ ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಿ ರೈತರ ಪಾಲ್ಗೊಳ್ಳುವಿಕೆಯಿಂದ ಬ್ರಿಟಿಷ್ ಮತ್ತು ಮೈಸೂರು ಅರಸೊತ್ತಿಗೆ ವಿರುದ್ಧ ನಡೆದ ಒಂದು ಮಹತ್ತರ ಬಂಡಾಯ. ಅದು ಹೇಳಿಕೊಳ್ಳುವಂತಹ ಯಾವುದೇ ನಾಯಕನ ಮಾರ್ಗದರ್ಶನವಿಲ್ಲದೆ ಇಟ್ಟ ಕ್ರಾಂತಿಕಾರಿ ಹೆಜ್ಜೆ. ಬಹುಶಃ ಅಸಹಕಾರ ಚಳವಳಿಯ ಸಂದರ್ಭದಲ್ಲಿ ಉತ್ತರ ಪ್ರದೇಶದ ಗೋರಖ್‌ಪುರಜಿಲ್ಲೆಯ ಚೌರಿಚೌರಾದ ಘಟನೆ ಬಿಟ್ಟರೆ ಗ್ರಾಮಂತರ ಪ್ರದೇಶದಲ್ಲಿ ಈ ರೀತಿಯ ಪ್ರತಿಭಟನೆ, ಸ್ವಾತಂತ್ರ್ಯಪೂರ್ವ ೨೦ನೇ ಶತಮಾನದಲ್ಲಿ ನಡೆದ ಒಂದು ಅಭೂತಪೂರ್ವ ಪ್ರತಿಭಟನೆ, ಎಂದು ಪ್ರೊ. ಎಸ್.ಚಂದ್ರಶೇಖರ್ ತಮ್ಮ ಲೇಖನವೊಂದರಲ್ಲಿ ದಾಖಲಿಸುತ್ತಾರೆ.

೧೯೪೨ರ ಸೆಪ್ಟೆಂಬರ್ ೨೮ರಂದು ಈಸೂರಿಗೆ ಪಟೇಲ ಮತ್ತು ಶ್ಯಾನುಭೋಗರು ತಮ್ಮ ದಾಖಲೆ ಪುಸ್ತಕಗಳೊಂದಿಗೆ ಬಂದಾಗ ಗ್ರಾಮದ ಹುಡುಗರು ಅವರಿಗೆ ವೃತ್ತಿಗೆ ರಾಜಿನಾಮೆ ನೀಡಲು ಮತ್ತು ಗಾಂಧಿ ಟೋಪಿ ಧರಿಸಲು ಒತ್ತಾಯಿಸಿದರು. ಅವರು ಒಪ್ಪದೇ ಹೋದಾಗ ದಾಖಲೆ ಪುಸ್ತಕಗಳನ್ನು ಕಸಿದುಕೊಂಡರು. ಇದನ್ನು ಈ ಅಧಿಕಾರಿಗಳು ಶಿಕಾರಿಪುರದಲ್ಲಿದ್ದ ಅಮಲ್ದಾರರಿಗೆ ವರದಿ ಮಾಡಿದಾಗ ಅಮಲ್ದಾರರು ಅಧಿಕಾರಿಗಳನ್ನು ಬಯ್ದು ದಾಖಲೆ ಪುಸ್ತಕಗಳನ್ನು ವಶಪಡಿಸಿಕೊಂಡು ಬರಲು ಸೂಚಿಸಿದರು. ಮಾರನೆಯ ದಿನ ಪಟೇಲ ಮತ್ತು ಶ್ಯಾನುಭೋಗರು ಗ್ರಾಮಕ್ಕೆ ಬಂದರಾದರೂ ಅವರಿಂದ ದಾಖಲೆ ಪುಸ್ತಕಗಳನ್ನು ಪಡೆಯಲಾಗಲಿಲ್ಲ. ಅವರಿಗೆ ಒಂಟಿಕಾಲಿನ ಮೇಲೆ ನಿಲ್ಲುವ ಶಿಕ್ಷೆ ನೀಡಲಾಯಿತು. ಗ್ರಾಮವನ್ನು ಸ್ವತಂತ್ರ ಹಳ್ಳಿ ಎಂದು ಘೋಷಿಸಿಕೊಂಡು ಮಲ್ಲಪ್ಪ ಎಂಬ ಹುಡುಗನನ್ನು ಸರ್ವಾಧಿಕಾರಿಯೆಂದು ಮತ್ತು ಜಯಪ್ಪ ಎಂಬ ಹುಡುಗನನ್ನು ಅಮಲ್ದಾರನನ್ನಾಗಿ ಮಾಡಿ, ಊರು ದೇವಾಲಯವನ್ನೇ ಕಛೇರಿಯಾಗಿ ಮಾಡಿಕೊಳ್ಳಲಾಯಿತು. ಊರ ಮುಂದೆ ಬೇಜವಾಬ್ದಾರಿ ಸರ್ಕಾರದ ಅಧಿಕಾರಿಗಳಿಗೆ ಪ್ರವೇಶ ನಿರಾಕರಿಸಿ ಬೋರ್ಡ್. ಹಾಕಲಾಯಿತು ಈ ಬೆಳವಣಿಗೆಯನ್ನು ಜಿಲ್ಲಾ ಕೇಂದ್ರಕ್ಕೆ ತಿಳಿಸಲು ಪಟೇಲ ಮತ್ತು ಶ್ಯಾನುಭೋಗರು ಹೋದರು.



ಸೆಪ್ಟೆಂಬರ್ ೨೮ರಂದು ಗ್ರಾಮಕ್ಕೆ ಅಮಲ್ದಾರರಾದ ಚೆನ್ನಕೃಷ್ಣಪ್ಪ ಪೊಲೀಸ್ ಇನ್‌ಸ್ಪೆಕ್ಟರ್ ಜಮಾಲುದ್ದೀನ್ ಶರೀಫ್, ಸಬ್ ಇನ್ಸ್‌ಪೆಕ್ಟರ್ ಕೆಂಚೇಗೌಡ, ದಫೇದಾರ ಸತ್ತಾರ್, ರೆವಿನ್ಯೂ ಇನ್ಸ್‌ಪೆಕ್ಟರ್ ಮುನಿಯಪ್ಪ ಮತ್ತು ಕೆಲವು ಪೊಲೀಸರು ಆಗಮಿಸಿದರು. ಸುದ್ದಿ ತಿಳಿದ ಯುವಕರು ದೇವಸ್ಥಾನಕ್ಕೆ ಬಂದರು. ಈ ಅಧಿಕಾರಿಗಳಿಗೂ ಗಾಂಧಿ ಟೋಪಿ ಧರಿಸಲು ಒತ್ತಾಯಿಸಿದರು. ದೇವಾಲಯದ ಮುಂದೆ ನೆಟ್ಟ ತ್ರಿವರ್ಣಧ್ವಜವನ್ನು ಪೊಲೀಸರು ಕಿತ್ತುಹಾಕಲು ಆರಂಭಿಸಿದಾಗ ಘರ್ಷಣೆ ಆರಂಭವಾಯಿತು. ಸಬ್ ಇನ್ಸ್‌ಪೆಕ್ಟರ್ ಕೆಂಚೇಗೌಡರು ತಾಳ್ಮೆ ಕಳೆದುಕೊಂಡು ರಿವಲ್ವಾರ್ ಬಳಸಿದಾಗ ಪರಿಸ್ಥಿತಿ ನಿಯಂತ್ರಣ ತಪ್ಪಿತು. ಗ್ರಾಮಸ್ಥರು ಪೊಲೀಸರ ಮೇಲೆ ರೇಗಿದರು. ಘರ್ಷಣೆಯಲ್ಲಿ ಅಮಲ್ದಾರ್ ಮತ್ತು ಸಬ್ ಇನ್ಸ್‌ಪೆಕ್ಟರ್ ಸ್ಥಳದಲ್ಲಿಯೇ ಮೃತರಾದರು. ಉಳಿದವರು ಸತ್ತಂತೆ ನಟಿಸಿ ಪಾರಾದರು. ಇಸಾಕ್‌ಮಿಯಾ ಎಂಬ ಪೊಲೀಸ್ ಓರ್ವರು ಹೇಗೋ ತಪ್ಪಿಸಿಕೊಂಡು ಶಿಕಾರಿಪುರಕ್ಕೆ ತಲುಪಿ ನಡೆದುದನ್ನು ವರದಿ ಮಾಡಿದರು.

ಮಾರನೆಯ ದಿನ ಜಿಲ್ಲಾಧಿಕಾರಿ ಅಪಾರ ಸಂಖ್ಯೆಯ ಪೊಲೀಸ್ ಮತ್ತು ಸೈನ್ಯ ಬಲದೊಂದಿಗೆ ಈಸೂರಿಗೆ ಆಗಮಿಸಿ ಗ್ರಾಮದ ಜನರ ಮೇಲೆ ದಾಳಿ ಮಾಡಿದರು. ಹಲವರ ಮನೆಗಳನ್ನು ಸುಟ್ಟರು. ಮುಖಂಡರ ಮನೆಗಳನ್ನು ಜಪ್ತಿಮಾಡಿದರು. ಸುಮಾರು ಎರಡು ವಾರಗಳ ಕಾಲ ಈಸೂರಿನಲ್ಲಿ ಬೀಡುಬಿಟ್ಟ ಸೈನಿಕರು, ಎಲ್ಲಾ ಮನೆಗಳನ್ನು ದೋಚಿದರು. ಗ್ರಾಮದಲ್ಲಿ ಭಯದ ವಾತಾವರಣ ಸೃಷ್ಟಿಸಿದರು. ಅನೇಕರು ಊರು ಬಿಡುವಂತೆ ಮಾಡಲಾಯಿತು. ಅಂತಿಮವಾಗಿ ೪೧ ಜನರ ವಿರುದ್ಧ ಮೊಕದ್ದಮೆ ಹೂಡಲಾಯಿತು. ಈಸೂರಿನಲ್ಲಿ ಪೊಲೀಸ್ ಮತ್ತು ಸೈನ್ಯ ನಡೆಸಿದ ಹಿಂಸೆಯನ್ನು ರಾಷ್ಟ್ರದಾದ್ಯಂತ ಖಂಡಿಸಲಾಯಿತು.

ಈ ಐತಿಹಾಸಿಕ ಘಟನೆಯ ವಿಚಾರಣೆಯಾಗಿ ಕೋರ್ಟ್ ಹನ್ನೊಂದು ಜನರಿಗೆ ಮರಣದಂಡನೆ, ೧೩ ಜನರಿಗೆ ಜೀವಾವಧಿ ಶಿಕ್ಷೆಯನ್ನು, ಉಳಿದವರಿಗೆ

ವಿವಿಧ ಪ್ರಮಾಣದ ಶಿಕ್ಷೆಯನ್ನು ವಿಧಿಸಿತು. ಸುಂದರ ರಾಜಾರಾಯ ಎಂಬುವವರು ಆಗ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾಗಿದ್ದವರು. ನಂತರ ತೀರ್ಪಿನ ವಿರುದ್ಧ ಹೈಕೋರ್ಟಿಗೆ ಅಪೀಲು ಹಾಕಲಾಯಿತು. ಅಲ್ಲಿ ಸರ್ರೈಲಿ ಎಂಬುವವರು ನ್ಯಾಯಾಧೀಶರಾಗಿದ್ದರು. ಹೈಕೋರ್ಟ್ ಐದು ಮಂದಿಗೆ ಗಲ್ಲು ಶಿಕ್ಷೆ ಖಾಯಂಗೊಳಿಸಿತು. ಗುರಪ್ಪ, ಮಲ್ಲಪ್ಪ, ಹಾಲಪ್ಪ, ಸೂರ್ಯನಾರಾಯಣ ಆಚಾರ್ ಮತ್ತು ಶಂಕರಪ್ಪ ಇವರೇ ಆ ಹುತಾತ್ಮರು. ಇವರನ್ನು ೧೯೪೩ರ ಮಾರ್ಚ್ ೮, ೯, ೧೦ರಂದು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಹಾಲಮ್ಮ, ನೀಲಕಂಠಪ್ಪ, ಸುಬ್ರಾಯಪ್ಪ, ಪಾರ್ವತಮ್ಮ, ಸಿದ್ಧಮ್ಮನವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಇನ್ನುಳಿದವರಿಗೆ ವಿವಿಧ ಪ್ರಮಾಣದ ಶಿಕ್ಷೆಗಳನ್ನು ವಿಧಿಸಲಾಯಿತು. ಐವರ ಗಲ್ಲು ಶಿಕ್ಷೆ ರದ್ದು ಮಾಡುವಂತೆ ರಾಜ್ಯ ಮಟ್ಟದ ನಾಯಕರು ಸಂಸ್ಥಾನದ ಸರ್ಕಾರವನ್ನು ಕೋರಿದರೂ ಮಹಾರಾಜರು ಸ್ಪಂದಿಸಲಿಲ್ಲ. ೧೯೪೬ರ ಅಕ್ಟೋಬರಲ್ಲಿ ಹಾಲಮ್ಮ, ಪರ್ವತಮ್ಮ ಮತ್ತು ರುದ್ರಮ್ಮ ಹಾಗೂ ಮತ್ತಿತರ ಎಂಟು ಜನರನ್ನು ಸರ್ಕಾರ ಬಿಡುಗಡೆ ಮಾಡಿತು. ಈ ಹೋರಾಟದಲ್ಲಿ ಪಾಲ್ಗೊಂಡ ಗ್ರಾಮಸ್ಥರಲ್ಲಿ ಅನೇಕರು ಅನಕ್ಷರಸ್ಥರು, ಅಲ್ಲದೇ ಬಾಲಕರಿಂದ ವೃದ್ಧರವರೆಗೆ ವಯಸ್ಸಿನ ತಾರತಮ್ಯವಿಲ್ಲದೆ ಭಾಗವಹಿಸಿದ್ದು ಗಮನಾರ್ಹ ಅಂಶವಾಗಿದೆ.

ಈಸೂರಿನ ಬಂಡಾಯದ ವಿಷಯದಲ್ಲಿ ಮೈಸೂರು ಸಂಸ್ಥಾನ ಸರ್ಕಾರ ನಡೆದುಕೊಂಡ ರೀತಿ ವಿದುರಾಶ್ವತ್ಥ ಘಟನೆಗಿಂತ ಭಿನ್ನವಾಗಿರಲಿಲ್ಲ. ಅಲ್ಲಿ ಗೋಲೀಬಾರ್ ಮೂಲಕ ಚಳುವಳಿಕಾರರನ್ನು ಬಲಿ ಪಡೆದರೆ, ಇಲ್ಲಿ ಗಲ್ಲಿಗೇರಿಸುವ ಮೂಲಕ ಚಳುವಳಿಕಾರರನ್ನು ಬಲಿ ಪಡೆಯಿತು. ಸಂಸ್ಥಾನ ಸರ್ಕಾರ ಬ್ರಿಟಿಷ್ ಸರ್ಕಾರಕ್ಕೆ ನಿಷ್ಠೆ ತೋರುವ ಅವಕಾಶವನ್ನು ಕಳೆದುಕೊಳ್ಳಲು ಸಿದ್ಧವಿರಲಿಲ್ಲವೆಂಬುದು ಇದರಿಂದ ದೃಢವಾಗುತ್ತದೆ. ೧೯೪೨ರ ಚಳುವಳಿಯಲ್ಲಿ ಈಸೂರಿನ ಗ್ರಾಮಸ್ಥರ ಪಾಲ್ಗೊಳ್ಳುವಿಕೆ ದೇಶಪ್ರೇಮದ ಕಾರಣದ್ದು, ವೈಯಕ್ತಿಕ ಹಿತಾಸಕ್ತಿಯದ್ದಲ್ಲ. ಹೀಗಾಗಿ ಇಂದಿಗೂ ಈ ಜನತಾ ಬಂಡಾಯ ಆದರ್ಶವಾಗಿ ಉಳಿದಿದೆ. ಈ ಚಳವಳಿ ನಡೆದು ಎಪ್ಪತ್ತೈದು ವರ್ಷ ಕಳೆದಿದೆ. ಆದರೆ ಅದರ ಪ್ರಭಾವ ರಾಜ್ಯದ ಜನರ ಮೇಲೆ ಹಾಗೆಯೇ ಉಳಿದು ಬಂದಿದೆ. ಇಡೀ ಚಳುವಳಿಯನ್ನು ಅವಲೋಕಿಸಿದರೆ ಅದೊಂದು ಜನಸಂಗ್ರಾಮವಾಗಿದ್ದುದು ಸ್ಪಷ್ಟವಾಗುತ್ತದೆ.



ಸ್ವಾತಂತ್ರ್ಯ ಸಂಗ್ರಾಮದ ಜೊತೆ ಜೊತೆಯಲ್ಲಿ ಅಸ್ಪೃಶ್ಯತಾ ನಿವಾರಣೆ, ಗ್ರಾಮೋದ್ಯೋಗಗಳ ಉತ್ಥಾನ, ಪತ್ರಿಕೋದ್ಯಮ, ಸಾಹಿತ್ಯಸೃಷ್ಟಿ, ಸಾಮಾಜಿಕ ಸುಧಾರಣೆ, ಸ್ತ್ರೀಯರ ಪುರೋಗಮನ, ರಾಷ್ಟ್ರೀಯ ಶಿಕ್ಷಣ ವಿಕಾಸ, ಮೊದಲಾದ ಅನೇಕ ಚಳವಳಿಗಳೂ ಅಂದು ಮೈತಳೆದಿವೆ. ಇವುಗಳ ವಿವರಗಳು ಪ್ರಮುಖವಾಗುತ್ತದೆ. ಹೋರಾಟಗಾರರ ಕಷ್ಟ, ಕಾರ್ಪಣ್ಯ ತ್ಯಾಗ, ಪರಿಶ್ರಮ, ಜೈಲುವಾಸದ ಕೋಟಲೆಗಳು ಅವರ ಸಾಹಸಮಯ ಸಾಧನೆಗಳು ಮೊದಲಾದ ವಿವರಗಳು ಸಂಗ್ರಹ ಯೋಗ್ಯವಾಗಿರುತ್ತವೆ.

❑

## ಆಕರ


೧. ಸಂಪಾದಕರು: ಡಾ. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಕರ್ನಾಟಕ ಸಂಗ್ರಾಮದ ಕುರಿತು. ಸಂಪುಟ ೧,೨,೩, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ೧೯೯೮.

೨. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ (ಪರಿಷ್ಕೃತ) ಸಂಪುಟ ೨, ಮೈ.ವಿ.ವಿ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ೨೦೦೭

೩. ಸಂ. ಡಾ. ಆರ್. ಗೋಪಾಲ್, ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು ೨೦೦೮.

೪. ಸಂಪಾದಕರು: ಬಸವಾನಿ ರಾಮಶರ್ಮ ಮತ್ತು ಟಿ.ಡಿ. ಶಂಕರನಾರಾಯಣರಾವ್, ಶಿವಮೊಗ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು, ಶಿವಮೊಗ್ಗ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘ(ರಿ), ರಾಮಣ್ಣಶ್ರೇಷ್ಠಿ ಪಾರ್ಕ್, ಶಿವಮೊಗ್ಗ ೧೯೯೨.

೫. ವಿ.ಎಸ್.ಹೆಗಡೆ ಸ್ವಾತಂತ್ರ್ಯ ಚಳುವಳಿಯ ಕರಪತ್ರಗಳು, ರಮಣಶ್ರೀ ಪ್ರಕಾಶನ, ಗಿರಿನಗರ, ಬೆಂಗಳೂರು–೨೦೦೫.

೬. ಕರ್ನಾಟಕದ ಇತಿಹಾಸ ಪುಸ್ತಕ.

೭. ಮಲೆನಾಡು ಮಿತ್ರ ವಿಶೇಷಾಂಕ, ಡಾ. ಕೆ.ಪ್ರಭಾಕರರಾವ್ ಅವರ ಲೇಖನ, ೧೯೪೨ರ ಭಾರತ ಬಿಟ್ಟು ತೊಲಗಿ ಜನ ಹೋರಾಟ ಪುಟ ೨.

೮. ಅಪ್ರತಿಮ ಹೋರಾಟಗಾರ ಧೋಂಡಿಯ ವಾಘ್, ಕ.ವೆಂ.ನಾಗರಾಜ್, ವಿ.ಕ. ೧೮.೧೨.೨೧.

೯. ಮಂಜುನಾಥ ಅಜ್ಜಂಪುರ, ಚನ್ನಗಿರಿಯ ಹುಲಿ. ವಿ.ಕ.

೧೦. ಶಿವಮೊಗ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು, ಡಾ.ಕೆ.ಜಿ.ವೆಂಕಟೇಶ್ ಅವರ ಭಾಷಣ.


❖ ❖ ❖

### ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
### ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |